ಸಚಿವರ ಹೇಳಿಕೆ

ಕೋಲಾರ ಜಿಲ್ಲೆ ಚಿಂತಾಮಣಿಯಲ್ಲಿ ನಡೆದ ಘಟನೆಯ ಕುರಿತು.

+ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಗೃಹ ಸಚಿವರು) : ಕೋಲಾರ ಜಿಲ್ಲೆಯ ಚಿಂತಾಮಣಿ ಘಟನೆಯ ಬಗ್ಗೆ ಬಿಲ್ಲಂಡ್ಲಹಳ್ಳಿ, ಪಂಗಂಪಲ್ಲಿ ಮತ್ತು ಓಬಳಾಪುರ ಗ್ರಾಮಗಳು ಒಂದರಿಂದೊಂದು ಅರ್ಧಕಿಲೋ ಮೀಟರ್‌ಗಳ ಅಂತರದಲ್ಲಿ ಒಂದೇ ಕಡೆ ಇವೆ.

ಶ್ರೀ ವಾಟಾಳ್ ನಾಗರಾಜ್ : ಏನಿದು ಗೃಹಸಚಿವರು ಚೆನ್ನಾಗಿ ಕನ್ನಡದಲ್ಲಿ ಓದುತ್ತಿದ್ದಾರೆ ಆದರೆ ನಮಗೆ ಇಂಗ್ಲೀಷ್ ಪ್ರತಿಯನ್ನು ಕೊಟ್ಟಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಈಗ ಕಳುಹಿಸಿಕೊಡುತ್ತೇನೆ.

ಬಿಲ್ಲಂಡ್ಲಹಳ್ಳಿ, ಪಂಗಂಪಲ್ಲಿ ಮತ್ತು ಓಬಳಾಪುರ ಗ್ರಾಮಗಳು ಒಂದರಿಂದೊಂದು ಅರ್ಧ ಕಿಲೋ ಮೀಟರುಗಳ ಅಂತರದಲ್ಲಿ ಒಂದೇ ಕಡೆ ಇವೆ, ಇತರ ಕೆಲವು ಅಕ್ಕಪಕ್ಕದ ಹಳ್ಳಿಗಳೂ ಸೇರಿದಂತೆ ಈ ಗ್ರಾಮಗಳ ಪ.ಜಾ:ಪರಿಶಿಷ್ಟ ಪಂಗಡಗಳ ಎಲ್ಲಾ ಜನರು 1.9.1997 ರಂದು ಡಾ|| ಅಂಬೇಡ್ಕರ್ ಜನ್ಮ ದಿನ ಸಮಾರಂಭಗಳನ್ನು ಏರ್ಪಡಿಸಲು ಇಚ್ಚಿಸಿದರು. ಬಿಲ್ಲಂಡ್ಲಹಳ್ಳಿಯಲ್ಲಿ ಸವರ್ಣೀಯರು ಇದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅವರು ಪರಊರಿನವರು ಬಿಲ್ಲಂಡ್ಲಹಳ್ಳಿಗೆ ಬಂದು ಸಮಾರಂಭ ಏರ್ಪಡಿಸುವುದನ್ನು ಒಪ್ಪಲಿಲ್ಲ. ನಿರ್ದಿಷ್ಟವಾಗಿ ಹೊರಗಿನ ಡಿ.ಎಸ್.ಎಸ್. ಮುಂದಾಳುಗಳು ಅಥವಾ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮುಂದಾಳುಗಳು ಸಮಾರಂಭದಲ್ಲಿ ಭಾಗವಹಿಸುವುದರ ಬಗ್ಗೆ ಅವರಿಗೆ ಅಸಮಾಧಾನವಿತ್ತು.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.)

2. 30 ಮತ್ತು 31-8-97 ರಂದು ಪೋಲಿಸರು ಬಿಲ್ಲಂಡ್ಲಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಸವರ್ಣೀಯರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ನಡುವೆ ಗಲಭೆ ಆಗುವುದನ್ನು ತಪ್ಪಿಸಲಿಕ್ಕಾಗಿ ಅನೇಕ ಶಾಂತಿ ಸಮಿತಿ ಸಭೆಗಳನ್ನು ಏರ್ಪಡಿಸಿದ್ದರು. ದಿನಾಂಕ 31-8-1997 ರಂದು ಅಲ್ಲಿಗೆ ಪೋಲಿಸ್ ಕಾವಲು ಮತ್ತು ಒಂದು ಡಿ.ಎ.ಆರ್. ತುಕಡಿಯನ್ನು ನಿಯುಕ್ತಗೊಳಿಸಲಾಯಿತು. ದಿನಾಂಕ1-9-1997ರಂದು ಡಿ.ಎಸ್.ಪಿ. ಮತ್ತು ಸಿ.ಪಿ.ಐ., ಚಿಂತಾಮಣಿ, ಪಿ.ಎಸ್.ಐ., ಕೆಂಚಾರ್ಲಹಳ್ಳಿ ಪೋಲಿಸ್ ಠಾಣೆ ಇವರು ಹೆಚ್ಚುವರಿ ಸಿಬ್ಬಂದಿಯೊಂದಿಗೆ ಸವರ್ಣೀಯರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಡುವೆ ಗಲಭೆ ಆಗುವುದನ್ನು ತಡೆಯಲು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಬಿಲ್ಲಂಡ್ಲಹಳ್ಳಿ ಗ್ರಾಮವನ್ನು ತಲುಪಿದರು. ಸವರ್ಣೀಯರು ಪೋಲಿಸರ ಚಲನವಲನವನ್ನು ತಡೆಯಲಿಕ್ಕಾಗಿ ವಿವಿಧ ಸ್ಥಳಗಳಲ್ಲಿ ಸುಮಾರು ಒಂದು ಕಿ.ಮೀ. ದೂರದವರೆಗೆ ಕಲ್ಲುಗಳನ್ನು ಬಳಸಿ ರಸ್ತೆ ತಡೆಗಳನ್ನು ನಿರ್ಮಿಸಿದ್ದರು. ಬಿಲ್ಲಂಡ್ಲಹಳ್ಳಿ ಮತ್ತು ಓಬಳಾಪುರ ಗ್ರಾಮಗಳಲ್ಲಿ ಸವರ್ಣೀಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲೆ ಹಲ್ಲೆ ಮಾಡುವ ಸಂಭವವಿದೆ ಎಂಬ ಮಾಹಿತಿಯ ಮೇಲೆ ಪೋಲಿಸರು ರಸ್ತೆ ತಡೆಗಳನ್ನು ತೆಗೆದು ಹಾಕಿ ಪಂಗಂಪಳ್ಳಿ ಗ್ರಾಮವನ್ನು ತಲುಪಿದರು. ಸವರ್ಣೀಯರ

ದೊಡ್ಡ ಗುಂಪುಗಳು ಕಲ್ಲುಗಳು, ದೊಣ್ಣೆಗಳು, ಇಟ್ಟಿಗೆಗಳು ಮತ್ತು ಮಾರಕಾಸ್ತ್ರಗಳೊಡನೆ ಪೋಲಿಸರ ಮೇಲೆ ಆಕ್ರಮಣ ಮಾಡಿದರು. ಡಿ.ಎಸ್.ಪಿ. ಮತ್ತು ಸಿ.ಪಿ.ಐ., ಚಿಂತಾಮಣಿ ಪಿ.ಎಸ್.ಐ., ಎ.ಆರ್.ಎಸ್.ಐ., ಹೆಚ್.ಸಿ.ಗಳು, ಎ.ಪಿ.ಸಿ.ಗಳು ಮತ್ತು ಅನೇಕ ಜನ ಸಿ.ಪಿ.ಸಿ.ಗಳಿಗೆ ಗಂಭೀರ ಸ್ವರೂಪದ ಗಾಯಗಳಾದವು.

3. ಪೋಲಿಸರು ಅಶ್ರುವಾಯು ಶೆಲ್ಲುಗಳನ್ನು ಸಿಡಿದರು, ಅವು ಅಸಮರ್ಥಗೊಂಡಾಗ ಲಾಠಿ ಪ್ರಹಾರ ಮಾಡಿದರು. ಗಲಭೆಕಾರರು ಎರಡು ಡಿ.ಎ.ಆರ್. ವ್ಯಾನುಗಳಿಗೆ ಬೆಂಕಿ ಹಚ್ಚಿದರು ಮತ್ತು ಅವುಗಳನ್ನು ಸಂಪೂರ್ಣವಾಗಿ ಸುಟ್ಟುಹಾಕಿದರು. ಅನಂತರ ಪೋಲಿಸರು ಗುಂಡು ಹಾರಿಸಿದರು ಮತ್ತು ಗುಂಪುಗಳನ್ನು ಬೆನ್ನಟ್ಟಿದ್ದರು. ಸಿಟ್ಟಿಗೆದ್ದ ಗುಂಪಿನ ಆಕ್ರಮಣದಲ್ಲಿ ಮೂರು ಜನ ಪೋಲಿಸರು (1) ಸಶಸ್ತ್ರ ಮುಖ್ಯ ಪೇದೆ ಶ್ರೀ ಅಬ್ದುಲ್ ಬಶೀರ್ (2) ಸಶಸ್ತ್ರ ಪೇದೆ ನರಸಿಂಹಯ್ಯ ಮತ್ತು (3) ಸಿವಿಲ್ ಪೇದೆ ಬಿ.ವಿ. ಸುಧಾಕರ್ ಸ್ಥಳದಲ್ಲೇ ಸಾವನಪ್ಪಿದರು. ಪೋಲಿಸರು ಹಾರಿಸಿದ ಗುಂಡಿನಿಂದ ಓಬಳಪುರದ ಗ್ರಾಮದ ನಿವಾಸಿ ಸುಧಾಕರ್ ಬಿನ್ ರಾಮರೆಡ್ಡಿ ಎಂಬುವವರು ಸ್ಥಳದಲ್ಲೇ ಸತ್ತರು. ಗಾಯಗೊಂಡಿದ್ದ ಎ.ಹೆಚ್.ಸಿ. ಮಹಜರ್ ಉಲ್ ಖಿಕ್, ಎ.ಪಿ.ಸಿ.ಗಳಾದ ಅಶ್ವತ್ಥ, ಅಸ್ಲಂ, ರಾಮಕೃಷ್ಣ, ಪಿ. ವಿ. ವೆಂಕಟರಮಣ, ವೆಂಕಟೇಶ್ ಮತ್ತು ಸಿ.ಪಿ.ಸಿ. ವೆಂಕಟರಮಣಪ್ಪ ಇವರನ್ನು ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಮತ್ತು ಕೋಲಾರದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ.

4. ಅಲ್ಲದೆ ಹೆಚ್ಚಿನ ಪೋಲಿಸ್ ತುಕಡಿಯನ್ನು ಭಾಧಿತ ಸ್ಥಳಕ್ಕೆ ಕಳುಹಿಸಲಾಯಿತು. ಕೋಲಾರದ ಪೋಲಿಸ್ ಸೂಪರಿಂಟೆಂಡೆಂಟ್‌ರವರು ಸ್ಥಳಕ್ಕೆ ಧಾವಿಸಿದರು. ತರುವಾಯ ಡಿ.ಐ.ಜಿ. ಕೇಂದ್ರ ವಲಯ ಮತ್ತು ಡಿ.ಸಿ. ಕೋಲಾರ ಇವರುಗಳೂ ಸಹ ಪರಿಸ್ಥಿತಿಯನ್ನು ನಿಯಂತ್ರಿಸಲು ಅವರಲ್ಲಿ ಸೇರಿಕೊಂಡರು. ಡಿ.ಜಿ. ಮತ್ತು ಐ.ಜಿ.ಪಿ.ಮತ್ತು ಎ.ಡಿ.ಜಿ.ಪಿ., ಕಾನೂನು ಸುವ್ಯವಸ್ಥೆ, ಇವರೂ ಸಹ ಸ್ಥಳಕ್ಕೆ ಭೇಟಿ ನೀಡಿದರು. ಈಗ ಪರಿಸ್ಥಿತಿ ಶಾಂತವಾಗಿದೆ.

5. ಹೆಚ್ಚಿನ ಸಂಖ್ಯೆಯಲ್ಲಿದ್ದ (ಸುಮಾರು 2000) ಸವರ್ಣೀಯರು ಮತ್ತು ಸುಮಾರು 300 ಜನರಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ಇವರ ನಡುವಿನ ಘರ್ಷಣೆಯನ್ನು ತಪ್ಪಿಸಲು ಪೋಲೀಸಿನವರು ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸಿದರು. ಗ್ರಾಮಸ್ಥರು ಪ್ರವೇಶಿಸುವುದನ್ನು ತಪ್ಪಿಸಲು, ಗ್ರಾಮದಲ್ಲಿ ಇಡಲಾದ ತಡೆಗಟ್ಟೆಗಳನ್ನು ತೆಗೆದುಹಾಕಲು ಅವರು ಪ್ರಯತ್ನಿಸಿದಾಗ, ಪೋಲಿಸರು ಅಲ್ಲಿನ ಜನರ ಕೋಪಕ್ಕೆ ತುತ್ತಾಗಬೇಕಾಯಿತು. ಪೋಲಿಸರು ಸಕಾಲದಲ್ಲಿ ಅವರನ್ನು ಹಿಮ್ಮೆಟ್ಟಿದರು. ಇಲ್ಲದಿದ್ದಲ್ಲಿ ಕಟ್ಟಕಡೆಗೆ ಗುಂಡು ಹಾರಿಸಬೇಕಾಗಿ ಬಂದು ಅನೇಕ ಸಾವು ನೋವುಗಳು ಉಂಟಾಗುತ್ತಿತ್ತು. ಹಿಮ್ಮೆಟ್ಟಿಸುವಾಗ, ಗುಂಪು ಮೂವರು ಪೋಲಿಸರುಗಳನ್ನು ಹಿಡಿದುಕೊಂಡು ಚೆನ್ನಾಗಿ ಥಳಿಸಿದರು. ತತ್ಪರಿಣಾಮವಾಗಿ ತೀವ್ರವಾಗಿ ಗಾಯಗೊಂಡ ತೀವ್ರ ಗಾಯಗೊಂಡು ಆ ಮೂವರು ಸತ್ತರು.

6. ಗ್ರಾಮಕ್ಕೆ ಭೇಟಿ ನೀಡಿದ ಡಿ.ಜಿ. ಮತ್ತು ಐ.ಜಿ.ಪಿ. ಮತ್ತು ಎ.ಡಿ.ಜಿ.ಪಿ., ಕಾನೂನು ಸುವ್ಯವಸ್ಥೆ ಇವರು ಜನರನ್ನು ಭೇಟಿಯಾಗಿ ಆ ಪ್ರದೇಶದಲ್ಲಿ ಶಾಂತಿ ನೆಲೆಸುವ ವ್ಯವಸ್ಥೆ ಮಾಡಿದರು. ಗೃಹ ಖಾತೆಯ ರಾಜ್ಯ ಸಚಿವರು ಚಿಂತಾಮಣಿ ಆಸ್ಪತ್ರೆಗೆ ಭೇಟಿ ನೀಡಿ, ಮೃತ ಪೋಲೀಸಿನವರ ಮೇಲೆ

ಪುಷ್ಪ ಗುಚ್ಚವನ್ನು ಇರಿಸಿದರು. ಮೃತ ಪೋಲೀಸಿನವರಿಗೆ (ಅ) ಒಂದು ಲಕ್ಷ ರೂಪಾಯಿ ಸಮೂಹ ವಿಮೆ, (ಆ) ಒಂದು ಲಕ್ಷ ರೂಪಾಯಿ ಎಕ್ಸ್‌ಗ್ರೇಷಿಯಾ ಸಂದಾಯ (ಇ) ನೌಕರರ ನಿವೃತ್ತಿಯ ದಿನಾಂಕದವರೆಗೆ ವಿಶೇಷ ವಿಶ್ರಾಂತಿ ವೇತನ. (ಈ) ಸರ್ಕಾರಿ ನೌಕರರಿಗೆ ಅನ್ವಯವಾಗಬಹುದಾದಂತೆ ಅನುಕಂಪದ ಆಧಾರದ ಮೇಲೆ ಮೃತರ ಹತ್ತಿರದ ಸಂಬಂಧಿಗಳಿಗೆ ಉದ್ಯೋಗ ಮತ್ತು ಇತರ ಸೌಲಭ್ಯಗಳನ್ನು ಕೊಡುವುದಾಗಿ ಸರ್ಕಾರವು ಪ್ರಕಟಿಸಿತು. ಪೋಲಿಸಿನವರ ಗುಂಡೇಟಿನಿಂದ ಮೃತ ಪಟ್ಟವರಿಗೆ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ನೀಡುವುದಾಗಿ ಸಹ ಸರ್ಕಾರವು ಪ್ರಕಟಿಸಿತು. ನಾನು ಹಾಗೂ ಪೋಲೀಸ್ ಸೀನಿಯರ್ ಆಫೀಸರ್ಸ್ ಬೆಳಿಗ್ಗೆ ಸ್ಥಳದಲ್ಲಿಯೇ ಇದ್ದೆವು ಈ ಒಂದು ಗಲಬೆಯಲ್ಲಿ ಮೂರು ಜನ ಪೋಲೀಸರು ಕೂಡ ತೀರಿಹೋಗಿದ್ದಾರೆ. ಈ ರೀತಿಯ ಕ್ಲಾಶಸ್ ಆಗಬಾರದೆಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಈಗ ಶಾಂತಿಯುತವಾಗಿದೆ, ಇನ್‌ಡಿಸ್‌ಕ್ರಿಮಿನೇಟ್ ದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಜನ ಹೇಳುತ್ತಿದ್ದಾರೆ. ಆದರೆ ಅಕಸ್ಮಾತ್ ಅವರು ಫೈರಿಂಗ್ ಮಾಡದಿದ್ದರೆ ಸುಮಾರು 20-25 ಜನ ಸ್ಪಾಟ್‌ನಲ್ಲಿ ಸಾಯುತ್ತಿದ್ದರು. police have acted with lot of restraint, and I hope ಈ ಸದನದಲ್ಲಿರುವ ಹಿರಿಯ ಸದಸ್ಯರೆಲ್ಲ ಇದನ್ನು ಅಪ್ರಿಷಿಯೇಟ್ ಮಾಡುತ್ತಾರೆ ಎಂದು ನಾನು ತಿಳಿಯುತ್ತೇನೆ. ಏಕೆಂದರೆ ಈ ಒಂದು ಪದ್ಧತಿ ಬೆಳೆಯಬಾರದು for the first time in the history of Karnataka, mob violence ನಲ್ಲಿ ಪೋಲೀಸರು ಫೈರಿಂಗ್ ಮಾಡಿದರೆ, ಜನಸಮುದಾಯ ಏನು ಹೇಳುತ್ತಾರೆ ಅಂದರೆ, ಪೋಲೀಸರು ಗಲಾಟೆ ಮಾಡುತ್ತಾರೆ, ಪೋಲೀಸರು ಗೋಲಿಬಾರ್ ಮಾಡಿದರು, ಅಮಾಯಕರನ್ನು ಕೊಂದುಹಾಕಿಬಿಟ್ಟರು, ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಹೇಳುತ್ತಾರೆ. ಇದೇ ಮೊದಲನೆಯ ಬಾರಿಗೆ ಪೋಲಿಸಿನವರು ಜನಸಮುದಾಯದಿಂದ ಹಲ್ಲೆಗೊಳಗಾಗಿದ್ದಾರೆ. ಕಳೆದ 24 ಗಂಟೆಗಳಿಂದ ಅಲ್ಲಿ ಬ್ಲಾಕ್ ಕ್ಲಾಷ್ ಏನೂ ಆಗಿಲ್ಲ, ಈ ಮಾತನ್ನು ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಎರಡು ನಿಮಿಷ ಅವಕಾಶ ಕೊಡಬೇಕು. ನಾನು ಆ ಸ್ಥಳಕ್ಕೆ ಬೆಳಿಗ್ಗೆ ಹೋಗಿ ಬಂದಿದ್ದೇನೆ.

MR. SPEAKER : Let the Leader of Opposition have his say.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಘಟನೆಯಲ್ಲಿ 22 ವರ್ಷದ ವಿದ್ಯಾರ್ಥಿ ಸತ್ತುಹೋಗಿದ್ದಾನೆ, ಅವನಿಗೆ ಏನಾದರೂ ಕಾಂಪೆನ್‌ಸೇಷನ್ ಕೊಡುತ್ತೀರಾ ? extraordinary pension till the date of retirement of the offficial, payment of Rs. 1 lakh group insurance; 1 lakh ex-gratia payment; appointtment to kin of the deceased on compasssionate grounds and other benefits appplicable to Government servant.

ಶ್ರೀ ಆರ್. ರೋಷನ್ ಬೇಗ್ : ಸುಧಾಕರ್ ರೆಡ್ಡಿ ಸಿವಿಲಿಯನ್, ಅವನಿಗೂ ಕೂಡ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಆದಕಾರಣ ನಾನು ಹೇಳುವುದೇನೆಂದರೆ, ಇಂತಹ ಇನ್‌ಸಿಡೆಂಟ್ ಬಗ್ಗೆ ನಾನು ಮೊದಲೇ ಹೇಳಿದ್ದೇನೆ,

MR. SPEAKER : I have a feeling, ನಾನು ಮಧ್ಯಾಹ್ನ ಡಿ.ಜಿ. ಅವರ ಹತ್ತಿರ ಸಹ ಮಾತನಾಡಿದೆ, ಸನ್ಮಾನ್ಯ ಮುಖ್ಯ ಮಂತ್ರಿಗಳು, ತಾವು, ಎಲ್ಲಾ ವಿವಿಧ ವಿರೋಧ ಪಕ್ಷಗಳ ಮುಖಂಡರುಗಳು ನಾವೆಲ್ಲಾ ಪ್ರತ್ಯೇಕವಾಗಿ ಸೇರಿ, ಸಭೆ ಮಾಡಿ ಇದನ್ನು ಕೂಲಂಕುಷವಾಗಿ ಚರ್ಚೆ ಮಾಡಿ ಎಲ್ಲೋ ಒಂದು ಕಡೆ ಮಾಹಿತಿಯನ್ನು ನಾವು ಇಡೀ ರಾಜ್ಯದ ಪರವಾಗಿ ಜನರಿಗೆ ಕೊಟ್ಟು ಇದು ಪುನಃ ಪುನಃ ಅಲ್ಲಿ, ಇಲ್ಲಿ ಮರುಕಳಿಸದಂತೆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಇದು ಬಹಳ ಸೂಕ್ಷ್ಮವಾದಂತಹ ವಿಚಾರ. ಎರಡೂ ಕಡೆ ತಪ್ಪು ಆಗಿರಬಹುದು, ಯಾರೋ ಕೆಲವರು ತಪ್ಪು ಮಾಡುವವರು, ಆ ಕಡೆ, ಈ ಕಡೆ ಇರಬಹುದು we should not allow this to repeat. We should be very careful. ಆದುದರಿಂದ ಬಹಳ ಎಚ್ಚರಿಕೆಯಿಂದ ಆತ್ಮಾವಲೋಕನ ಮಾಡಿ as a representatives of the people we will have to send a message to the people of the State. That is what I feel, Instead of taking it up,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಮುಖ್ಯ ಮಂತ್ರಿಗಳ ಮುಖಾಂತರ ಹೋದರು ಕೂಡ, ಅಧಿಕಾರಿಗಳಿಂದ ಒಂದು ಮೆಸೇಜ್ ಹೋಗುತ್ತದೆ. ಅನಂತರ ತಪ್ಪು ಯಾರೇ ಮಾಡಿರಲಿ, ಅವರಿಗೆ ಶಿಕ್ಷೆ ಆಗುತ್ತದೆ. ಆದರೆ ಆ ನೆಪದಲ್ಲಿ ಬೇರೆ ಅವರ ಮೇಲೆ atrocities - ಮಾಡುವಂತದ್ದು, ಇನ್ನೂ ಅವರಿಗೆ ತುಳಿಯುವಂತದ್ದು ಆಗಬಾರದು. ಆದುದರಿಂದ ತಮ್ಮವತಿಯಿಂದ, ತಮ್ಮಬಾಯಿಂದ ಮೆಸೇಜ್ ಹೋದರೆ ಖಂಡಿತವಾಗಿ ಅದರ ಪರಿಣಾಮ ಪ್ರತಿಯೊಂದು ತಾಲ್ಲೂಕಿನಲ್ಲೂ, ಜಿಲ್ಲೆಯಲ್ಲೂ ಕೂಡ ಆಗುತ್ತದೆ. ಮತ್ತು ಪೋಲೀಸಿನವರಾಗಲಿ, ಅಥವಾ ಜಿಲ್ಲಾಧಿಕಾರಿಗಳಾಗಲಿ, ಬಹಳ ಸಂಯಮದಿಂದ ವರ್ತನೆ ಮಾಡುತ್ತಾರೆ. ಅದಕ್ಕೆ ಹಿಂದೆ ಏನಿತ್ತು ಅಂದರೆ, ದೇವರಾಜ್ ಅರಸು ಅವರ ಕಾಲದಲ್ಲಿ ಮತ್ತು ಅನೇಕ ಮುಖ್ಯ ಮಂತ್ರಿಗಳು ಕೂಡ ಇದನ್ನೇ ಫಾಲೋ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಯಾವ ಯಾವ ಜನಾಂಗದ ಜನ ಜಾಸ್ತಿ ಇರುತ್ತಾರೆ ಅಲ್ಲಿ ಅದೇ ಜನಾಂಗದ ಎಸ್.ಪಿ. ಅಥವಾ ಡಿ.ಸಿ. ಆಗಬಾರದು ಎನ್ನತಕ್ಕಂತದ್ದು ಒಂದು. ಮತ್ತು ಕೆಲವು ಎಗ್ಸಿಕ್ಯುಟೀವ್ ಪೋಸ್ಟ್‌ನಲ್ಲಿ ಕೂಡ ಅವರಿಗೆ ಇಡಬಾರದು ಎಂದು. ವ್ಯತ್ಯಾಸ ಮಾಡಿ ಇಲ್ಲಿಂದ ಅಲ್ಲಿ, ಅಲ್ಲಿಂದ ಇಲ್ಲಿ, ಇದು ಒಂದು. ಎರಡನೆಯದಾಗಿ ಏನೆಂದರೆ ಕನಿಷ್ಟ ಪಕ್ಷ ಎರಡು, ಮೂರು ಎಗ್ಸಿಕ್ಯುಟೀವ್ ಪೋಸ್ಟ್‌ನಲ್ಲಿ ಒಂದಾದರೂ ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಕೊಡಬೇಕು. ಅಂದರೆ ಯಾರು ಇದರ ಬಗ್ಗೆ ಕಮಿಟ್‌ಮೆಂಟ್ ಇರುವಂತಹ ಅಧಿಕಾರಿಗಳು ಇರುತ್ತಾರೆ, ಅವರಿಗೆ ಕೊಡಬೇಕು ಎನ್ನುವುದು 1978ರಲ್ಲೇ ಸರ್ಕಾರದ ಆಜ್ಞೆ ಆಗಿತ್ತು. ಅದನ್ನು ಶ್ರೀಮತಿ ಇಂದಿರಾ ಗಾಂಧಿಯವರು ಇಷ್ಯೂ ಮಾಡಿದ್ದರು. ಅಲ್ಲಿಂದ ಬಂದಿದೆ GADಯಲ್ಲಿ ಇರಬಹುದು ಅದು. ಆದರೆ ಇಂತಹ ಹುದ್ದೆಗಳಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಾಂಗದ ಯಾರನ್ನಾದರೂ ಹಾಕಿದರೆ ಸರಿ ಹೋಗುತ್ತದೆ ಎಂದು ಅಭಿಪ್ರಾಯವಲ್ಲ, ಯಾವ ಅಧಿಕಾರಿಗೆ ಒಂದು ಫೀಲಿಂಗ್ ಇರುತ್ತದೆ, ಒಬ್ಬ ಮನುಷ್ಯನ

ಕಷ್ಟವನ್ನು ಕೇಳಿಸಿಕೊಳ್ಳುವಂತಹ ಒಂದು ತಾಳ್ಮೆ ಇರುತ್ತದೆ, ನೇರವಾಗಿ ಯಾರು ಜನರ ಹತ್ತಿರ ಇರುತ್ತಾರೆ, ಅವರ ಮಾತನ್ನು ಕೇಳುತ್ತಾರೆ, ಅವರ ನೋವನ್ನು ಕೇಳುತ್ತಾರೆ ಅಂತಹ ಅಧಿಕಾರಿ ಇದ್ದರೆ ಅಂತವರ ಮುಂದೆ ತಮ್ಮ ಗೋಳನ್ನು ಹೇಳಿಕೊಳ್ಳುವಂತಹ ಪ್ರಯತ್ನವಾದರೂ ಆಗುತ್ತದೆ. ಆದುದರಿಂದ, ದಯವಿಟ್ಟು ಈ ಒಂದು ಪೋಸ್ಟಿಂಗ್ ಮಾಡುವಾಗ ಎಗ್ಸಿಕ್ಯುಟೀವ್ ಪೋಸ್ಟಿಂಗ್ಸ್‌ನಲ್ಲಿ ವಿಶೇಷವಾಗಿ ಪೋಲೀಸ್ ಮತ್ತು ಜಿಲ್ಲಾಧಿಕಾರಿಗಳ ಇಲಾಖೆಯಲ್ಲಿ ತಾವು ಇದನ್ನು ಗಮನದಲ್ಲಿ ಇಟ್ಟುಕೊಂಡು ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಸನ್ಮಾನ್ಯ ಅಧ್ಯಕ್ಷರೆ, ತಾವು ಅಭಿಪ್ರಾಯ ಕೊಟ್ಟಂತೆ ಇದು ಕೇವಲ ಸರ್ಕಾರ ಮತ್ತು ಪೋಲೀಸ್ ಇವೆರಡರಿಂದ ಮಾತ್ರ ಹತೋಟಿಯಲ್ಲಿ ಇಡುವಂತಹ ವಿಷಯ ಅಲ್ಲ. ಇದು ದೇಶದಾದ್ಯಂತ ಕೆಲವು, ಭಾವನಾತ್ಮಕವಾದ ಘಟನೆಗಳಿಗೆ ಸಂಬಂಧಿಸಿದಂತೆ ಒಂದು ಜನಾಂಗದವರು, ಇನ್ನೊಂದು ಜನಾಂಗದವರ ಮೇಲೆ ಎರಗುತ್ತಿರುವುದು ದುರದೃಷ್ಟಕರ. ಆದರೆ ನಮ್ಮ ರಾಜ್ಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಇದು ಬಹಳ ಸೂಕ್ಷ್ಮವಾದ ವಿಚಾರ ಆದುದರಿಂದ ನಾವೆಲ್ಲರೂ ಸೇರಿ ಸಮಾಜದಲ್ಲಿ ಇರುವಂತಹ ಈ ಒಂದು ವಿಷ ಏನಿದೆ, ಈ ವಿಷದ ಮೂಲವನ್ನೇ ತೆಗೆಯುವುದಕ್ಕೆ ಒಂದು ಸೌಹಾರ್ದಯುತ ವಾತಾವರಣ ಬರುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಉದಾಹರಣೆಗೆ, ಮೈಸೂರು ಜಿಲ್ಲೆಯಲ್ಲಿ ಕಳೆದ ವರ್ಷ ಸವರ್ಣೀಯರಿಗೂ ಮತ್ತು ಹರಿಜನರಿಗೂ ಕದನವಾಯಿತು. ಆಗ ತಕ್ಷಣ ನಾನೇ ಅಲ್ಲಿಗೆ ಹೋಗಿ ಎರಡೂ ಜನಾಂಗದವರನ್ನು ಸೇರಿಸಿ, ಅವರ ಸಣ್ಣ-ಪುಟ್ಟ ಸಮಸ್ಯೆಗಳು ಏನು ಇತ್ತು, ಅವುಗಳನ್ನು ಬಗೆಹರಿಸಿ ಬಂದೆ. ಇಂತಹ ಸಂದರ್ಭದಲ್ಲಿ ನಾವು ಯಾವುದೇ ಪಕ್ಷ ಎಂದು ನೋಡದೆ, ಅಥವಾ ಯಾವುದೇ ಒಂದು ರೀತಿಯ ಒಂದು ಕಡೆ, ಒಂದು ಜನಾಂಗದ ಅತಿಕ್ರಮಣ ಇರಬಹುದು, ಇನ್ನೊಂದು ಜನಾಂಗದ ತಪ್ಪು ಇರಬಹುದು, ಅದನ್ನು ನಾವೆಲ್ಲಾ ಪಕ್ಷ ಭೇದ ಮರೆತು, ಸೌಹಾರ್ದಯುತವಾದ ವಾತಾವರಣವನ್ನು ನಿರ್ಮಾಣ ಮಾಡಬೇಕು. ಕರ್ನಾಟಕದಲ್ಲಿ, ಕರ್ನಾಟಕದ ಪರಂಪರೆಯಲ್ಲಿ, ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯ ಘಟನೆಗಳು ಆಗಬಾರದು, ಇದು ಬಹಳ ದುರಾದೃಷ್ಟಕರವಾದುದು. ಯಾವ ರಾಜ್ಯದಲ್ಲಿ ಎಂಟುನೂರು ವರ್ಷಗಳ ಕೆಳಗೆ ಬ್ರಾಹ್ಮಣ ಮಹಿಳೆಯನ್ನು ಹರಿಜನ ಯುವಕನಿಗೆ ಮದುವೆ ಮಾಡಿಸಿತು, ಅಂತಹ ಒಂದು ಪರಂಪರೆ ಇರುವ ರಾಜ್ಯದಲ್ಲಿ ಯಾವುದೋ ಒಂದು ಸಣ್ಣ-ಪುಟ್ಟ ಕಾರಣಕ್ಕೆ ಈ ರೀತಿ ಮಾಡುವುದು ಸರಿ ಅಲ್ಲ. ನಂತರ ನಾನು ಇತ್ತೀಚೆಗೆ ಅಂಬೇಡ್ಕರ್ ಚಿತ್ರ, ಬಸವವೇಶ್ವರರ ಪ್ರತಿಮೆಯಿಂದ ಈ ಸಣ್ಣ ಸಣ್ಣ ಘಟನೆಗಳಿಂದ ಜನಾಂಗದವರು ಕೆರಳುವಂತಹದು ಇದೆಯಲ್ಲಾ, ಅದನ್ನು ನಾವು ಏನಾದರು ಮಾಡಿ ತಡೆ ಹಿಡಿಯಬೇಕು. ಇದರಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ ಅವರು, ಬಿ.ಜೆ.ಪಿ. ಮುಖಂಡರು ನಮ್ಮ ಪಕ್ಷದ ಮುಖಂಡರು ಬೇರೆ ಬೇರೆ ಪಕ್ಷದ ಮುಖಂಡರು, ವಾಟಾಳ್ ಅವರು ಎಲ್ಲರೂ ಸೇರಿ, ಆದಷ್ಟು ಬೇಗ CODE OF CONDUCT ಪೋಲೀಸ್‌ನವರಿಗೆ ಹೇಳುತ್ತೇವೆ. ನಾನು ಅತ್ಯಂತ ವಿಷಾದದಿಂದ ಹೇಳುತ್ತೇನೆ. ಪೋಲೀಸಿನವರು ಇವತ್ತು ಹೊಡೆಸಿಕೊಂಡು ಏನು ಸತ್ತಿದ್ದಾರೆ, ಆದರೆ ಅವರು ಸಿಟ್ಟಿಗೆದ್ದಿದರೆ ಅವರು ಸಾಕಷ್ಟು ಜನರನ್ನು ಕೊಲ್ಲಬಹುದಾಗಿತ್ತು. ಆ ಕೋಪಕ್ಕೆ ಹೋಗದೆ, ವಿಕೋಪಕ್ಕೆ ಹೋಗದೆ ಹೊಡೆಸಿಕೊಂಡು ಸತ್ತಿದ್ದಾರೆ. ಆದುದರಿಂದ, ಈ ವಿಷಯದಲ್ಲಿ

ಮಾತ್ರ ನಾವೆಲ್ಲರೂ ಬಹಳ ಒಮ್ಮತದಿಂದ ಯಾರೇ ತಪ್ಪು ಮಾಡಿದ್ದರೂ ಅವನಿಗೆ ಶಿಕ್ಷೆ ಆಗಬೇಕು, ಅವನು ನಮ್ಮವನು ಇವನು ನಮ್ಮವನು ಎಂದು ನೋಡಬಾರದು, ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳಬೇಕು. ಸನ್ಮಾನ್ಯ ಅಧ್ಯಕ್ಷರೆ, ಸಮಾಜದಲ್ಲಿ ಎರಡೇ ಜಾತಿ ಇರುವುದು, ಅದು ಸಮಾಜದಲ್ಲಿ ವಿಷ ಹಿಂಡುವವರು, ಸಮಾಜದಲ್ಲಿ ಈ ರೀತಿಯ ಕೃತ್ಯಗಳನ್ನು ಅಪೇಕ್ಷೆ ಪಡುವವರು ತಮ್ಮ ವೈಯಕ್ತಿಕ ಕಾರಣಗಳಿಗೊಸ್ಕರ, ಕುಚೇಷ್ಟೆಗಳಿಗೋಸ್ಕರ ಈ ರೀತಿ ಮಾಡುವಂತವರು ಇದ್ದಾರೆ. ಇಂತವರು ಎಲ್ಲಾ ಜನಾಂಗದಲ್ಲೂ ಇದ್ದಾರೆ. ಈ ರೀತಿಯಾದಂತಹ ಹಿಂಸೆಯಿಂದ ಅವರಿಗೆ ಏನು ಸುಖ ಸಿಗುತ್ತದೆ ಎಂದು ನನಗೆ ತಿಳಿಯುವುದಿಲ್ಲ. ಈ ರೀತಿಯ mischievous element anti-social elements for personal aggrandisement and personal benefits, ಈ ರೀತಿ ಪಾವಗಡದಲ್ಲಿ ಒಂದು, ಮೊನ್ನೆ ದಿವಸ ಚಿಂತಾಮಣಿಯಲ್ಲಿ ಮತ್ತೊಂದು, ಶಹಪೂರ್‌ನಲ್ಲಿ ಮತ್ತೊಂದು ಘಟನೆ, ಇಂತಹ ಘಟನೆಗಳು ಆಗದಂತೆ ಎಲ್ಲರೂ ಸೇರಿ ತೀರ್ಮಾನ ಮಾಡಿ Code of conduct ಮಾಡಬೇಕಾಗಿದೆ ನಾನು ಒಂದು ಮಾತನ್ನು ಸನ್ಮಾನ್ಯ ಶ್ರೀ ಮಹದೇವಪ್ಪನಿಗೆ ಹೇಳಿದೆ, ಅಪ್ಪ, ದಲಿತ ಸಂಘದ ಸಮಿತಿಯ ಪ್ರಮುಖರು ಯಾರ್ಯಾರು ಇದ್ದಾರೆ ಅವರನ್ನು ಕರೆಯಿಸಿ, ಅವರ ಮೂಲತಃ ಕೆಲವು ಮನ್ನಿಸಲೇ ಬೇಕಾದಂತಹ ಬೇಡಿಕೆಗಳು ಇವೆ ಕೆಲವು ಸಾಧ್ಯವಾಗದೇ ಇರುವಂತಹದು ಇವೆ. ಅದನ್ನು ಅವರು ಹತೋಟಿಗೆ ತಂದು, ಎಲ್ಲೋ ಒಂದು ಕಡೆ ಹಿಂದು-ಮುಸ್ಲಿಂ ಗಲಾಟೆ ಆದರೆ, ಹಿಂದುಗಳೂ ಹೋಗಬೇಕು, ಮುಸ್ಲಿಂರು ಹೋಗಬೇಕು. ಸವರ್ಣೀಯರಿಗೂ, ದಲಿತರಿಗೂ ಘಟನೆ ಆದರೆ ಆಗಲೂ ಹೋಗಬೇಕು. ನಾವು ಎಲ್ಲರೂ ಹೋಗಬೇಕು, ನಾವು ಆಫೀಸರನ್ನ ಅಪಾಯಿಂಟ್ ಮಾಡಿದರೆ ಅದು ಸರಿ ಹೋಗುತ್ತದೆ ಅನ್ನುವುದಲ್ಲ. ಏಕೆಂದರೆ ಕೆಲವು ಸಾರಿ ನನ್ನ ಗಮನಕ್ಕೂ ಬಂದಿದೆ. ಒಬ್ಬ ಪರಿಶಿಷ್ಟ ಜನಾಂಗದ ಒಬ್ಬ ಆಫೀಸರನ್ನು ಎಲ್ಲೋ ಒಂದು ಕಡೆ ಹಾಕಿದರು, ಅವನು ಅಲ್ಲಿ ಇಲ್ಲದಿದ್ದನ್ನೆಲ್ಲಾ ಒಂದು ಹೊಸ ಪ್ರಾಬ್ಲಂ ಕ್ರಿಯೇಟ್ ಮಾಡಿದ, ಅದಕ್ಕೆ ಅವನನ್ನು ಅಲ್ಲಿ ನೀನು ಇರಬೇಡ ಎಂದು ಬೇರೆ ಕಡೆಗೆ ಕಳಿಸಿದೆ. ಅವರು ಹೇಳಿದ್ದು ನಿಜ, ಅವರ ಜಾತಿಗೆ ಸೇರಿದವರು, ಅವರನ್ನು ರಕ್ಷಣೆ ಮಾಡುತ್ತಾರೆ ಎನ್ನುವ ವಿಶ್ವಾಸ ಇದ್ದರೆ, ಅಂಥ ಘಟನೆಗಳು ಇರುವುದಿಲ್ಲ. ಸ್ವಲ್ಪ ಸ್ವಲ್ಪ ಸಣ್ಣಪುಟ್ಟ ಜಗಳಗಳು ಶುರುವಾಗುವುದಕ್ಕಿಂತ ಮುಂಚೆನೇ ಎರಡೂ ಕಡೆಯವರನ್ನು ಕರೆಸಿ ನಿವಾರಣೆ ಮಾಡುತ್ತಾರೆ. ಆ ರೀತಿ ನಿವಾರಣೆ ಮಾಡುವಂತಹ ಪೋಲೀಸ್ ಅಧಿಕಾರಿ ಆಗಿರಲಿ, ಜಿಲ್ಲಾಧಿಕಾರಿಗಳೇ ಆಗಿರಲಿ, ಅಥವಾ ಇನ್ಯಾವುದೇ ಅಧಿಕಾರಿಗಳು ಇರಲಿ, ಸಂಬಂಧಪಟ್ಟ ಅಧಿಕಾರಿಗಳು ಇರಲಿ, ಅವರನ್ನು ಗೌರ್ನಮೆಂಟ್ ಆರ್ಡರ್ ಇದೆ ಎಂದು ಅಲ್ಲ, ಇಟ್ ಇಸ್ ಎ ನೆಸಸರಿ, ಆ ದೃಷ್ಟಿಯಿಂದ ಯಾವ ರೀತಿ ಬ್ಯಾಲೆನ್ಸ್ ಮಾಡಬೇಕು ಮಾಡುತ್ತೇವೆ. ಆದರೆ ಅದಕ್ಕಿಂತ ಹೆಚ್ಚಾಗಿ ನಾವೆಲ್ಲರೂ ಇಂತಹ ವಿಷ ಹರಡದಂತೆ ನೋಡಿಕೊಳ್ಳಬೇಕು. ಅದಕ್ಕೆ ತಾವು ಯಾವಾಗ ಕರೆದರೂ, ತಾವು ಏನೇ ಸಲಹೆ ಕೊಟ್ಟರೂ ಸರ್ಕಾರ ಅದಕ್ಕೆ ಅನುಮತಿ ಕೊಡುತ್ತದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸನ್ಮಾನ್ಯ ಗೃಹ ಸಚಿವರು ಹೇಳಿಕೆ ಕೊಟ್ಟಿದ್ದಾರೆ, ಅವರು ಹೇಳಿರುವಂತದರಲ್ಲಿ ಸತ್ಯಾಂಶ ಇದೆ. ಆದರೆ ವಾಸ್ತವವಾಗಿ ಈ ಘಟನೆಗೆ ಮೂಲಭೂತವಾಗಿ ಕಾರಣರು ಯಾರು ಎಂದು ಹೇಳಲಿಲ್ಲ. ನಾನು ಅವರು, ಇಬ್ಬರು ಬೆಳಿಗ್ಗೆ, ಚಿಂತಾಮಣಿಗೆ ಹೋಗಿದ್ದೆವು,

ಅವರು ಚಿಂತಾಮಣಿಯಿಂದ ವಾಪಸ್ಸು ಬಂದರು.

ಅಧ್ಯಕ್ಷರು : ಚರ್ಚೆ ಮಾಡಬೇಕೇ?

ಮಾನ್ಯ ಸದಸ್ಯರು : ಅಲ್ಲ, ಅವರು ಒಂದು ಒಳ್ಳೆಯ ಸೂಕ್ತವಾದಂತ ವಿಷಯ ಹೇಳಿದ ಮೇಲೆ ವಿಚಾರ ಮಾಡಬೇಕಾಗುತ್ತದೆ.

ಅಧ್ಯಕ್ಷರು : ತಮ್ಮನ್ನು ಅವಾಯಿಡ್ ಮಾಡಬೇಕೆಂದು ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆ ಘಟನೆ ಬಗ್ಗೆ ಮಾತ್ರ ಹೇಳುವುದು ಬೇರೆ ವಿಷಯವನಲ್ಲ. ಈ ಮೂರು ಜನ ಪೋಲೀಸರು ಈ ಘಟನೆಯಲ್ಲಿ ಸತ್ತಿದ್ದಾರಲ್ಲ, ಅವರಿಗೆ ನೀವು ಪರಿಹಾರ ರೂಪದಲ್ಲಿ ಎರಡು ಲಕ್ಷ ರೂಪಾಯಿ ಮೂರು ಲಕ್ಷ ರೂಪಾಯಿ ಹಣವನ್ನು ಏನೋ ಕೊಡುತ್ತೀರಾ, ಆದರೆ ಆ ಮಕ್ಕಳಿಗೆ ತಂದೆಯನ್ನು ವಾಪಸ್ಸು ಕೊಡುವುದಕ್ಕೆ ಆಗುವುದಿಲ್ಲ.

8.00 ಪಿ.ಎಂ.

ಈಗ ಸುಧಾಕರರೆಡ್ಡಿ ಎನ್ನುವವನು ಸತ್ತಿದ್ದಾನೆ, ನಾನು ಆ ಊರಿಗೆ ಹೋಗಿದ್ದೆ, ಆಗ ಗೃಹ ಮಂತ್ರಿಗಳು ಚಿಂತಾಮಣಿಯಿಂದ ವಾಪಸ್ಸು ಬಂದುಬಿಟ್ಟಿದ್ದರು. ಅಲ್ಲಿ ಪರಿಸ್ಥಿತಿ ಹೇಗಿತ್ತು ಎಂದರೆ ಆ ಸತ್ತ ವ್ಯಕ್ತಿಯನ್ನು ಹೂಳುವುದಕ್ಕೂ ಅಲ್ಲಿ ಜನರು ಇರಲಿಲ್ಲ, ಆತನ ತಂದೆಯೇ ತನ್ನ ಮಗನನ್ನು ಹೂಳುವುದಕ್ಕೋಸ್ಕರ ಗೋರಿಯನ್ನು ಸ್ವತಃ ತೋಡುತ್ತಿದ್ದ. ಅಲ್ಲಿ ಆ ಪರಿಸ್ಥಿತಿ ಬಂದಿದೆ. ಇಡೀ ಊರಿನಲ್ಲಿ ಯಾರೂ ಕೂಡ ಅಲ್ಲಿ ಉಳಿದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇಡೀ ಘಟನೆ ಅಲ್ಲಿ ನಡೆಯುವ ಅವಶ್ಯಕತೆಯೇ ಇರಲಿಲ್ಲ. ಅಲ್ಲಿ ಪೋಲಿಸರಾಗಲಿ, ಆ ವ್ಯಕ್ತಿಗಳಾಗಲಿ ಸಾಯುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಅಲ್ಲಿ ದಲಿತರು ಮತ್ತು ಬೇರೆ ಸಮಾಜದ ಜನರ ಮಧ್ಯೆ ಘರ್ಷಣೆ ಕೂಡ ನಡೆದಿಲ್ಲ. ಯಾವ ಘರ್ಷಣೆಯಾಗಲಿ, ಗಲಾಟೆಯಾಗಲಿ ನಡೆದಿಲ್ಲ. ಯಾರ ಮೇಲೆ ಯಾರೂ ಕೂಡ ಕೈ ಮಾಡಿಲ್ಲ, ಬಾಯಿ ಮಾತಿನ ಜಗಳ ಕೂಡ ಅಲ್ಲಿ ಆಗಿಲ್ಲ. ಏನೂ ಆಗದೇ ಇರತಕ್ಕಂಥ ಒಂದು ಘಟನೆಗೆ ಆ ಹೆಸರಿನಲ್ಲಿ ನಾಲ್ಕು ಜನರು ಬಲಿಯಾಗುವುದು ಎಂದರೆ ಏನರ್ಥ? ಇದಕ್ಕೆ ಏನು ಕಾರಣ? ಅದಕ್ಕೋಸ್ಕರ ನಾನು ಏನು ಹೇಳುತ್ತಿದ್ದೇನೆಂದರೆ, ಆ ಘಟನೆ ನಡೆಯುವ ನಾಲ್ಕು ದಿವಸಗಳ ಕೆಳಗಡೆ ಒಂದು ಕಂಪ್ಲೇಂಟ್‌ನ್ನು ಕೊಟ್ಟಿದ್ದಾರೆ. ಈ ಊರಿನಲ್ಲಿ ಆ ಕಾರ್ಯಕ್ರಮ ಮಾಡುವುದು ಬೇಡ, ಈ ಚಿಂತಾಮಣಿಯಲ್ಲಿ ಈಗಾಗಲೇ ಎರಡ್ಮೂರು ಘಟನೆಗಳು ನಡೆದಿವೆಯಾದ ಕಾರಣ ಆ ಟೆನ್‌ಶನ್ ಇರುವುದರಿಂದ ಸಧ್ಯಕ್ಕೆ ಕಾರ್ಯಕ್ರಮವನ್ನು ಪೋಸ್ಟ್‌ಪೋನ್ ಮಾಡಿ ಎಂದು ಆ ಊರಿನ ಎಲ್ಲಾ ಜಾತಿಯವರು ಸೇರಿ ಪೋಲಿಸ್ ಸ್ಟೇಶನ್‌ನಲ್ಲಿ ಕಂಪ್ಲೆಂಟ್ ಕೊಟ್ಟಿದ್ದಾರೆ. ಇದಕ್ಕೆ ಸ್ಥಳೀಯ ಪೋಲಿಸಿನವರು ಪಾಪ ಪ್ರಾಮಾಣಿಕವಾಗಿ ತಮ್ಮ ಪ್ರಯತ್ನವನ್ನು ಮಾಡಿದ್ದಾರೆ. ಇದರ ಬಗ್ಗೆ ಪರ್ಸ್ಯೂ ಮಾಡಿ ಇಲ್ಲಿ ಈ ಕಾರ್ಯಕ್ರಮವನ್ನು ಈಗ ಮಾಡುವುದು ಬೇಡ, ಟೆನ್‌ಶನ್ ಇದೆ, ಚಿಂತಾಮಣಿಯಲ್ಲಿ ಹಿಂದೆ ಒಂದು ಘಟನೆ ನಡೆದಿದೆ, ಶ್ರೀನಿವಾಸಪುರದಲ್ಲಿ ಒಂದು ಘಟನೆ ನಡೆದಿದೆಯಾದ ಕಾರಣ ಕಾರ್ಯಕ್ರಮವನ್ನು ಒಂದಷ್ಟು ದಿವಸ ಮುಂದಕ್ಕೆ ಹಾಕಿಕೊಳ್ಳಿ ಎಂದು ಆ ಜನರಿಗೆ ಹೇಳಿದ್ದಾರೆ. ಆದರೆ ಅವರು ಒಪ್ಪಲಿಲ್ಲ.

ಮತ್ತೆ ಇವರು ಏನು ಮಾಡಿದ್ದಾರೆಂದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಎಸ್.ಪಿ. ಮುಖಾಂತರ ಅವರ ಪ್ರಭಾವ ಬೀರಿ ನೀವು ರಕ್ಷಣೆ ಕೊಡಿ ಅವರು ಮೀಟಿಂಗ್ ಮಾಡಲಿ ಎಂದು ಹೇಳಿದ್ದಾರೆ, ಇದು ನನಗೆ ಕೊಟ್ಟಿರತಕ್ಕಂಥ ಮಾಹಿತಿ. ನಾನು ಬೇರೆ ಏನನ್ನೂ ಹೇಳುತ್ತಿಲ್ಲ. ಆ ಕಾರಣಕ್ಕೋಸ್ಕರ ಅಲ್ಲಿಯ ಲೋಕಲ್ ಪೋಲೀಸಿನವರು ಅಲ್ಲಿ 4 ಗಂಟೆಗೆ ಕಾರ್ಯಕ್ರಮವನ್ನು ಫಿಕ್ಸ್ ಮಾಡಿದ್ದಾರೆ.

ಅಧ್ಯಕ್ಷರು : ಫ್ಯಾಕ್ಟ್ಸ್, ನಾನು ಏನು ಹೇಳುತ್ತೇನೆಂದರೆ, ನೀವು ವಿವರವನ್ನು ಹೇಳುತ್ತಿದ್ದೀರಿ. ಆದರೆ ಆ ವಿವರ ಸರಿಯಾಗಿ ಹೊಂದಿಕೆ ಆಗುತ್ತಿಲ್ಲ. ನೀವು ನನ್ನ ಹತ್ತಿರ ಮಾತನಾಡಿದಿರಿ. ರೆಡ್ಡಿಯವರು ಹೇಳತಕ್ಕಂಥದ್ದು ಏನೆಂದರೆ ಗ್ರಾಮದಲ್ಲಿರತಕ್ಕಂಥ ಎಲ್ಲಾ ಜನಾಂಗದ ಜನರೂ ಸೇರಿ ಈ ಸಭೆಯನ್ನು ನಡೆಸುವುದು ಸದ್ಯಕ್ಕೆ ಬೇಡ ಎಂದು ಹೇಳಿದ್ದರು. ಹೊರಗಿದ್ದಂಥವರು ಹೋಗಿ ಈ ಸಭೆಯನ್ನು ಮಾಡಲೇಬೇಕು ಎಂದು ಹೇಳಿದರು. ಇವರುಗಳು ಎಸ್.ಪಿ.ಯವರನ್ನು ಭೇಟಿ ಮಾಡಿ ನಮಗೆ ಹಕ್ಕಿಲ್ಲವೇ, ನಮ್ಮನ್ಯಾರು ಊರಿಗೆ ಹೋಗುವುದಕ್ಕೆ ತಡೆಯುವರು, ನಾವು ಅಂಬೇಡ್ಕರ್ ಜಯಂತಿಯನ್ನು ಮಾಡಲೇಬೇಕು ಎಂದರು. ಆಗ ಆಯಿತು ಮಾಡಿ ಎಂದು ಹೇಳಿ ಅಲ್ಲಿದ್ದ ಪೋಲಿಸಿನವರಿಗೆ ರಕ್ಷಣೆ ಕೊಡಿ ಎಂದು ಹೇಳಿ ಸಭೆಯನ್ನು ನಡೆಸುವುದಕ್ಕೆ ಹೇಳಿದರು. ಏಕೆಂದರೆ ಸಭೆ ಮಾಡಬೇಡಿ ಎಂದು ಹೇಳುವ ಹಕ್ಕು ನಮಗಿಲ್ಲವೆಂದು ಅವರು ತಿಳಿದುಕೊಂಡು ಸಭೆಯನ್ನು ನಡೆಸಿಕೊಳ್ಳಿ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಆಗ ಹೊರಗಿನವರನ್ನು ಕರೆದುಕೊಂಡು ಹೋಗಿ ಆ ಸಭೆಯನ್ನು ನಡೆಸುತ್ತಾರೆ ಎನ್ನತಕ್ಕಂಥ ಅನುಮಾನ ಆ ಗ್ರಾಮಸ್ಥರಿಗೆ ಬಂದದ್ದರಿಂದ ಅವರು ಸಿಟ್ಟಿಗೆದ್ದು ಹೊರಗಿನವರ ಮೇಲೆ ಇದ್ದ ಸಿಟ್ಟನ್ನು ಪೋಲಿಸಿನವರ ಮೇಲೆ ತೋರಿಸಿದರು. That is the crux of the problem.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಹೌದು ತೋರಿಸಿದ್ದಾರೆ.

Mr. SPEAKER: Alright, let us not discuss it. It is an unfortuntate infixent.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇದಕ್ಕೆ ಸಂಬಂಧಪಟ್ಟ ವರಿಷ್ಠಾಧಿಕಾರಿ ಮೇಲೆ ನೀವು ಕ್ರಮ ತೆಗೆದುಕೊಳ್ಳಿ. ಏಕೆ ಈ ಘಟನೆಯಾಗಬೇಕಾಗಿತ್ತು, ಅಲ್ಲಿ ಏಕೆ ಪೋಲಿಸಿನವರು ಸಾಯಬೇಕಾಗಿತ್ತು,

ಅಧ್ಯಕ್ಷರು : ಈಗ ನಾವು ಇಲ್ಲಿ ಕುಳಿತು ಅದನ್ನೆಲ್ಲಾ ಚರ್ಚೆ ಮಾಡುವುದು ಬೇಡ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಹಾಗಾದರೆ ಆ ಘಟನೆ ನಡೆಯುವುದಕ್ಕೆ ಯಾರು ಕಾರಣರಲ್ಲವೇ? ಯಾರು ಇದಕ್ಕೆ ಜವಾಬ್ದಾರರೇ ಅಲ್ಲವೇ? ತಾವೇ ಹೇಳಬೇಕು, ಹೀಗಾದರೆ ನನ್ನ ಪ್ರಶ್ನೆಗೆ ಯಾರು ಕಾರಣರಲ್ಲ, ಯಾರೂ ಜವಾಬ್ದಾರರಲ್ಲವೇ?

ಅಧ್ಯಕ್ಷರು : ನಾನು ಹೇಳಿದ್ದುದು ಈಗ ಅದರ ಬಗ್ಗೆ ಚರ್ಚೆ ಬೇಡವೆಂದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದು ಬೇಡವೇ? ಯಾರೂ ಜವಾಬ್ದಾರರಲ್ಲವೇ ಇದಕ್ಕೆ? ಏನೋ ಅಲ್ಲಿ ಕೆಲವರು ಸತ್ತಿದ್ದಾರೆಂದು ಹೇಳಿ ಪೋಲಿಸ್ ಕುಟುಂಬಕ್ಕೆ ಒಂದಷ್ಟು ಪರಿಹಾರ ಮತ್ತು ಮತ್ತೊಬ್ಬ ಸತ್ತ ವ್ಯಕ್ತಿಯ ಕುಟುಂಬಕ್ಕೆ ಇಷ್ಟು ಪರಿಹಾರ ಕೊಟ್ಟುಬಿಟ್ಟರೆ

ಹೇಗೆ? ನಿಜವಾಗಿಯೂ ಈ ಘಟನೆ ನಡೆಯುವುದಕ್ಕೆ ಯಾರು ಜವಾಬ್ದಾರಿಯಾಗುತ್ತಾರೆ? ಇವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡವೇ? ಹಿಂದೆ ಈ ರೀತಿಯಲ್ಲಿ ಹಲವಾರು ಘಟನೆಗಳು ನಡೆದಂಥ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಮುಳುಬಾಗಿಲಿನಲ್ಲಿ ಒಂದು ಘಟನೆ ನಡೆದಾಗ ಅಲ್ಲಿಯ ಎಸ್.ಪಿ.ಯನ್ನು ನೀವು ವರ್ಗ ಮಾಡಿದಿರಿ. ಆದರೆ ಈಗ ಇಲ್ಲಿ ಮೂವರು ಪೋಲಿಸರು ಮತ್ತು ಒಬ್ಬ ನಾಗರೀಕ ಸತ್ತಿರುವ ಸಂದರ್ಭದಲ್ಲಿ ಯಾರ ಮೇಲೂ ಕ್ರಮ ತೆಗೆದುಕೊಳ್ಳುವುದು ಬೇಡವೆಂದರೆ ಇದಕ್ಕೆ ಸರ್ಕಾರ ಹೇಗೆ ವಿವೇಚನೆಯನ್ನು ಮಾಡುತ್ತದೋ ನನಗಂತೂ ಅರ್ಥವಾಗುತ್ತಿಲ್ಲ. ನಾನು ಕೇಳುವುದೇನೆಂದರೆ ಅಲ್ಲಿ ನಾಲ್ಕು ಜನರು ಸಾಯುವ ಘಟನೆ ನಡೆಯುವುದಕ್ಕೆ ಯಾರು ಕಾರಣರು? ಇದಕ್ಕೆ ಯಾರು ಜವಾಬ್ದಾರರಿಲ್ಲವೇ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ವಿವರಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಯಾರು ತಪ್ಪಿತಸ್ತರು, ಯಾರು ಏನು ಮಾಡುವುದಕ್ಕೆ ಹೋದರು, ಏಕೆ ಹೀಗಾಯಿತು ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಹೇಳುವುದಕ್ಕೆ ಹೋದರೆ ಈಗ ಗಲಾಟೆ ಇಲ್ಲದೇ ಇರುವ ಕಡೆ ಗಲಾಟೆ ನಡೆಯಲು ಮತ್ತಷ್ಟು ತುಪ್ಪ ಹಾಕಿದ ಹಾಗೆ ಆಗುತ್ತದೆ. ಆದುದರಿಂದ, ಆ ರೀತಿಯಾಗುವುದು ಬೇಡ. ಆದರೆ ಪೋಲಿಸಿನವರನ್ನು ಯಾರು ಕೊಂದರು ಅದಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಸಾಕ್ಷ್ಯಾಧಾರಗಳು ಸಿಕ್ಕಿದರೆ ಅವರನ್ನು ಹಿಡಿದು ದಸ್ತಗಿರಿ ಮಾಡಿ ಅವರಿಗೆ ಕಾನೂನಿನ ಪ್ರಕಾರ ಛಾರ್ಜ್ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಆದರೆ ಈಗ ಅಲ್ಲಿ ಶಾಂತಿ ಇದೆ. ಆ ಶಾಂತಿಯನ್ನು ನಾವು ಕಾಪಾಡಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ನನ್ನದಿಲ್ಲ. ನಾನು ಏನು ಹೇಳುತ್ತೇನೆಂದರೆ ಆ ಘಟನೆ ನಡೆಯಲು ಮೂಲ ಕಾರಣರಾಗಿರತಕ್ಕಂಥ ಆ ಪೋಲಿಸ್ ವರಿಷ್ಠಾ -ಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಬೇಡಪ್ಪಾ, that leads to some other complications. ಆಗುತ್ತದೆ. ಆದುದರಿಂದ ಅದರ ಮೇಲೆ ಇಲ್ಲಿ ಚರ್ಚೆ ಬೇಡ ಎಂದಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನೇಕ ಮೂವ್‌ಮೆಂಟ್‌ಗಳಲ್ಲಿ ಅದು ಟ್ರೇಡ್ ಯೂನಿಯನ್ ಮೂವ್‌ಮೆಂಟೇ ಇರಬಹುದು ಅಥವಾ ಇನ್ನಾವುದಾದರೂ ಸಾಮಾಜಿಕ ಚಳುವಳಿಯೇ ಇರಬಹುದು ಆ ಊರಿನವರು ಶಕ್ತರಿರಲಿಲ್ಲವೆಂದರೆ ಹೊರಗಿನವರು ಹೋಗಿ ಸಪೋರ್ಟ್ ಮಾಡುತ್ತಾರೆ. ಟ್ರೇಡ್ ಯೂನಿಯನ್‌ನಲ್ಲಿ ಆ ಫ್ಯಾಕ್ಟರಿಯಲ್ಲಿ ಮಜಬೂತಾದಂಥ ಯೂನಿಯನ್ ಇರಲಿಲ್ಲವೆಂದರೆ ಹೊರಗಿನ ಯೂನಿಯನ್‌ನವರು ಬಂದು ಪ್ರೊಟೆಸ್ಟ್ ಮಾಡುತ್ತಾರೆ. ಅದಕ್ಕಾಗಿಯೇ ನಾವು ಇಲ್ಲಿ ಸುಮ್ಮನೇ ಅದರ ಮೇಲೆ ಡಿಸ್‌ಕಸ್ ಮಾಡುವುದು ಬೇಡ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ಸಭೆಯನ್ನು ಮಾಡತಕ್ಕಂಥದ್ದನ್ನು ತಡೆದದ್ದು ಸರಿ ಎಂದು ನಾನು ಹೇಳುತ್ತಿಲ್ಲ. ಸಭೆ ನಡೆಸಬಾರದು ಎಂದು ಹೇಳುವ ಹಕ್ಕು ಯಾರದೂ ಇಲ್ಲ, ಪ್ರಜಾಪ್ರಭುತ್ವದಲ್ಲಿ

ಯಾರು ಎಲ್ಲಿ ಬೇಕಾದರೂ ಹೋಗಿ ಸಭೆಯನ್ನು ನಡೆಸಬಹುದು. ಆದರೆ ಅಲ್ಲಿದ್ದಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಧ್ಯಕ್ಕೆ ಸಭೆ ನಡೆಸುವುದು ಬೇಡವೆಂದು ಅಲ್ಲಿಯ ಜನರು ಹೇಳಿದ್ದಾರೆ. 15 ದಿವಸದ ಹಿಂದೆ ಚಿಂತಾಮಣಿಯಲ್ಲಿ ಒಂದು ಘಟನೆ ನಡೆಯಿತು.

ಅಧ್ಯಕ್ಷರು : ಈಗ ರೆಡ್ಡಿಯವರೇ ನನ್ನ ಮಾತನ್ನು ಕೇಳಿ. ಸತ್ತವರು ಸತ್ತರು ಮತ್ತು ಅವರು ಈಗ ಮಣ್ಣು ಆಗಿಹೋದರು. ಪೋಲಿಸಿನವರು ನಾರ್ಮಲ್ ಕೋರ್ಸ್‌ನಲ್ಲಿ ಮೂರು ಜನರು ಸತ್ತಿರುವುದರಿಂದ ಇಷ್ಟು ಹೊತ್ತಿಗೆ ಪೋಲಿಸಿನವರು ರೌದ್ರಾವತಾರವನ್ನೇ ತಾಳಬೇಕಾಗಿತ್ತು. ಆದರೆ ಆ ರೀತಿ ಅವರು ಏನನ್ನೂ ಮಾಡಿಲ್ಲದೇ ಬಹಳ ತಾಳ್ಮೆಯಿಂದ ನಡೆದುಕೊಂಡಿದ್ದಾರೆ. ಹಳ್ಳಿಗಳಲ್ಲಿ ಹೋಗಿ ಎಲ್ಲೂ ಯಾವ ರೀತಿಯ ದೌರ್ಜನ್ಯವನ್ನೂ ಮಾಡಿಲ್ಲ. ಜನಗಳೂ ಕೂಡ ಹೆದರಿ ಈಗ ನೆಮ್ಮದಿಯಿಂದ ಇದ್ದಾರೆ. ಈಗ ಸಧ್ಯಕ್ಕೆ ಫರ್ದರ್ ಯಾವ ರೀತಿಯ ಗಲಾಟೆಗಳೂ ಆಗಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಈ ಘಟನೆ ನಡೆಯುವುದಕ್ಕೆ ಆ ಸಮಾಜದವರೂ ಕಾರಣರಲ್ಲ, ಈ ಸಮಾಜದವರೂ ಕಾರಣರಲ್ಲ.

ಅಧ್ಯಕ್ಷರು : ಅದಕ್ಕೇ ನಾನು ಹೇಳುತ್ತಿರುವುದು. ನಮ್ಮ ಪ್ರಯತ್ನವಿಲ್ಲದೇ ಅಲ್ಲಿ ಶಾಂತಿ ನೆಲೆಸಿದೆ. ಹೀಗಿರುವಾಗ ಮತ್ತೆ ನಾವಿಲ್ಲಿ ಏನೋ ಮಾತನಾಡುವುದಕ್ಕೆ ಹೋಗಿ ಮತ್ತೆ ಗಲಾಟೆ ನಡೆಯುವುದು ಬೇಡ. ಆದುದರಿಂದ, ಅದರ ಡೀಟೆಲ್ಸ್‌ಗೆ ಹೋಗುವುದು ಬೇಡ, ಅದನ್ನು ಇಲ್ಲಿಗೇ ನಿಲ್ಲಿಸಿಬಿಡೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಹಲವಾರು ಸಂದರ್ಭಗಳಲ್ಲಿ ನೀವು ತಪ್ಪು ತಿಳುವಳಿಕೆಗೆ ನಮ್ಮನ್ನು ತೆಗೆದುಕೊಳ್ಳುತ್ತಿದ್ದೀರಿ. ನಾನು ಏನು ಹೇಳುತ್ತಿದ್ದೇನೆಂದರೆ ಆ ಘಟನೆಗೆ ಆ ಸಮಾಜದವರು ಮತ್ತು ಈ ಸಮಾಜದವರು ಯಾರೂ ಕಾರಣರಲ್ಲ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅವರಿಂದ ಯಾವ ಗಲಭೆಯೂ ಆಗಿಲ್ಲ.

ಅಧ್ಯಕ್ಷರು : ಈಗ ತಾವು ಏನು ಅಪೇಕ್ಷೆಪಡುತ್ತಿದ್ದೀರಿ? ಅದನ್ನಾದರೂ ಹೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಹೇಳುತ್ತಿರುವುದೇನೆಂದರೆ, ಈ ಘಟನೆ ಕೋಲಾರ ಜಿಲ್ಲೆಯ ಪೋಲಿಸ್ ವರಿಷ್ಠಾಧಿಕಾರಿ ಕರ್ತವ್ಯಚ್ಯುತಿಯಿಂದ ನಡೆದಿದೆಯಾದ ಕಾರಣ ಅವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕು.

Mr. SPEAKER : In fact we must compliment him. I am also from that district. He is not a native of that district. He does not belong to the major community. On several crucial occasions it is his alertness that has brought peace to the district. Let us be fair to anybody.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಘಟನೆ ನಡೆದಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಎಲ್ಲೂ ಕೂಡ ಇಂಥ ಘಟನೆ ಆಗಬಾರದು. ಮಾನ್ಯ ಮುಖ್ಯಮಂತ್ರಿಗಳು ಶಾಂತಿಯನ್ನು ನೆಲಸಬೇಕು ಎಂದು ಏನು ಹೇಳಿದ್ದಾರೆ ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಮತ್ತು ಸಹಕಾರವಿದೆ.

ಈ ರೀತಿ ಪೋಲೀಸ್ ಕಾಯಿದೆಗಿಂತ ಹೆಚ್ಚಾಗಿ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರೂ ಎಲ್ಲರೂ ಪಕ್ಷಾತೀತವಾಗಿ ಕುಳಿತು ಚರ್ಚೆ ಮಾಡಿ ರಾಜ್ಯದ ಜನತೆಗೆ ಎಲ್ಲಿಯೂ ಈ ರೀತಿ ಆಗಬಾರದು ಎನ್ನುವ ದೃಷ್ಟಿಯಿಂದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಬೇಕಾದ್ದು ಮೊದಲನೆ ಆದ್ಯ ಕರ್ತವ್ಯವಾಗಿರುತ್ತದೆ. ಆ ದೃಷ್ಟಿಯಿಂದ ಹಿಂದೆ ಅನೇಕ ಬಾರಿ ಇಂಥ ಸನ್ನಿವೇಶಗಳು ಎದುರಾದಾಗ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜಧಾನಿಯಲ್ಲಿ ಶಾಂತಿ ಸಭೆ ಮಾಡಿ ಆ ಸಭೆಯ ಮೂಲಕ ಸಂದೇಶವನ್ನು ಕಳುಹಿಸಿರತಕ್ಕಂಥ ನಿದರ್ಶನಗಳು ನಡೆದಿವೆ. ಆದುದರಿಂದ ಇದನ್ನು ಬಹಳ ಬೇಗ ಮಾಡಬೇಕು, ಅಲ್ಲಿಯ ಜನಕ್ಕೆ ಶಾಂತಿ ನೆಲಸಬೇಕು ಆ ನಿಟ್ಟಿನಲ್ಲಿ ಎಲ್ಲರೂ ಅಣ್ಣತಮ್ಮಂದಿರಂತೆ ಬಾಳಬೇಕು ಎನ್ನುವುದರಲ್ಲಿ ಎರಡನೇ ಅಭಿಪ್ರಾಯವೇ ಇಲ್ಲ. ಅವರು ಹೇಳಿಕೆ ಕೊಟ್ಟಿರತಕ್ಕಂಥದ್ದರಲ್ಲಿ ಚರ್ಚೆಗೆ ಹೋಗುತ್ತೀವಿ ಎಂದಲ್ಲ, ದಿನಾಂಕ 30-08-97ರಂದು ಶಾಂತಿ ಸಭೆಯನ್ನು ನಡೆಸಿದ್ದಾರೆ. ದಿನಾಂಕ 31ಕ್ಕೆ ಅಲ್ಲಿ ಪೋಲಿಸಿನವರು ಬಂದಿದ್ದಾರೆ. ಇದಾದಮೇಲೆ ಒಂದನೇ ತಾರೀಖು ರಸ್ತೆಯ ಮೇಲೆಲ್ಲಾ ಕಲ್ಲು ಹಾಕಿ ಒಳಗಡೆ ಪೋಲಿಸರು ಹೋಗುವುದಕ್ಕೆ ಆಗಿಲ್ಲ ಎನ್ನುವುದು ಸೇರಿದಂತೆ ಒಟ್ಟು ಮೂರು ಪ್ರಶ್ನೆಗಳು ಬಹಳ ಮುಖ್ಯವಾಗಿವೆ. ಆದುದರಿಂದ, ಪೋಲಿಸರು ಇನ್ನೂ ಹೆಚ್ಚಿನ ಮುಂಜಾಗ್ರತೆ ವಹಿಸಿದ್ದರೆ ಈ ಪರಿಸ್ಥಿತಿ ಆಗುತ್ತಿರಲಿಲ್ಲ, ಇದು ಸ್ಪಷ್ಟವಾಗಿದೆ. ಏಕೆಂದರೆ 30ನೇ ತಾರೀಖು ಶಾಂತಿ ಸಭೆ ನಡೆದಿದೆ, 1ನೇ ತಾರೀಖು ಪೋಲಿಸ್ ಅಲ್ಲಿಯೇ ಇದ್ದಾರೆ, ಇದರ ಪರಿಸ್ಥಿತಿಯ ಅರಿವು ಪೋಲಿಸರಿಗಿದೆ, ಈ ಅರಿವಿದ್ದು ಒಂದೆರಡು ಕಿ.ಮೀ. ದೂರದವರೆಗೂ ಕಲ್ಲು ಹಾಕಿದ್ದರು ಎಂಬುದನ್ನೂ ಹೇಳುತ್ತಾರೆ.

ಅಧ್ಯಕ್ಷರು : ಗುಪ್ತದಳದವರು ಇನ್ನೂ ಹೆಚ್ಚು ಜಾಗ್ರತೆ ವಹಿಸಿ ಕೆಲಸ ಮಾಡಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಈ ಗುಪ್ತದಳ ಸರಿಯಾಗಿ ಕೆಲಸ ಮಾಡುವುದರಲ್ಲಿ ವಿಫಲವಾಗಿದೆ ಎನ್ನುವ ಮಾತನ್ನು ನಾನು ಈ ಸಭೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಏಕೆಂದರೆ 30ನೇ ತಾರೀಖು ಶಾಂತಿ ಸಭೆ ನಡೆದಿದೆ, 1ನೇ ತಾರೀಖು ಅಲ್ಲಿಯೇ ಪೋಲಿಸ್‌ನವರಿದ್ದಾರೆ. ಮತ್ತೆ ರಸ್ತೆ ಮೇಲೆ ಕಲ್ಲು ಹಾಕಿದ್ದಾರೆ ಎಂದು ಹೇಳಿದರೆ ಆಗ ಆ ಕಲ್ಲನ್ನು ತೆಗೆಸಿ ಅಲ್ಲಿಗೆ ಹೆಚ್ಚು ಪೋಲಿಸರನ್ನು ಆ ಊರಿಗೆ ಕಳುಹಿಸಿದ್ದರೆ ಪೋಲಿಸಿನವರೂ ಸಾಯುತ್ತಿರಲಿಲ್ಲ, ಈ ಘಟನೆಯೂ ನಡೆಯುತ್ತಿರಲಿಲ್ಲ, ಅಲ್ಲಿ ಶಾಂತಿ ಖಂಡಿತ ನೆಲೆಸುತ್ತಿತ್ತು. ಆದರೆ, ಇದರಲ್ಲಿ ಎಲ್ಲೋ ಒಂದು ಕಡೆ ಪೋಲಿಸಿನವರು ಎಡವಿದ್ದಾರೆ ಎನ್ನತಕ್ಕಂಥದ್ದರಲ್ಲಿ ಸ್ಪಷ್ಟವಾಗಿದೆ. ಆದರೂ ಸಹಿತ ಇಂಥ ಘಟನೆಗಳು ಎಲ್ಲೂ ನಡೆಯಬಾರದು ಎನ್ನುವ ದೃಷ್ಟಿಯಿಂದ ಈ ಘಟನೆಯಲ್ಲಿ ಅವರದು ಸರಿ ಅಥವಾ ಇವರದು ಸರಿ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಈ ರಾಜ್ಯದಲ್ಲಿ ಇಂಥ ಘಟನೆಗಳು ಆಗಬಾರದು ಎಂದು ಹೇಳಿ ನಾನೂ ಕೂಡ ಈ ರಾಜ್ಯದ ಜನತೆಯಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಸುರೇಶ್‌ರವರೇ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಿ, ಮೈಸೂರು ಶಾಸಕರು ಮತ್ತು ವಾಟಾಳ್‌ರವರು ಇಬ್ಬರೂ ಮೈಸೂರ್ ಅಡ್ವೋಕೇಟ್ಸ್ ಮತ್ತು ಪೋಲೀಸ್ ಘಟನೆ ಬಗ್ಗೆ ಹೇಳಿದ್ದರು. ಒಂದೊಂದು ನಿಮಿಷ ಅದರ ಬಗ್ಗೆ ಪ್ರಸ್ತಾಪ ಮಾಡಿಬಿಡಿ. ಅದಾದಮೇಲೆ ಬೇಡಿಕೆಗಳ ಮೇಲೆ ಚರ್ಚೆ ಮುಂದುವರೆಸೋಣ. ಸ್ವಲ್ಪ ತಡವಾದರೂ ಚಿಂತೆಯಿಲ್ಲ. ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಗಂಟೆ ಅಷ್ಟೊತ್ತಿಗೆ ಯಾವುದೋ ಒಂದು

ಕಾರ್ಯಕ್ರಮ ಧಾರವಾಡದಲ್ಲಿ ಇದೆ, ಅದಕ್ಕೆ ಹೋಗಬೇಕೆಂದು ಹೇಳಿದ್ದಾರೆ. ಅವರಿಂದ ರಿಪ್ಲೈ ಆಗಬೇಕಾಗಿರುವುದರಿಂದ ನಾಳೆ ಬೆಳಿಗ್ಗೆ ರಿಪ್ಲೈ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನಾಳೆ ಸಾಯಂಕಾಲದವರೆಗೂ ಮಾಡಲಿ. ಇಲ್ಲದಿದ್ದರೆ ನಾಡಿದ್ದು ಮುಂಜಾನೆ ಮಾಡಲಿ. ನಾವು ಇಷ್ಟೆಲ್ಲಾ ಶಾಸಕರು ಇದ್ದೇವೆ, ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇನ್ನು ಪವರ್ ಮೇಲೆ ಯಾರೂ ಮಾತನಾಡಿಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ ಮೇಲೆ ಮಾತನಾಡಿಲ್ಲ. ನಾವೇನು ಟೈಂ ವೇಸ್ಟ್ ಮಾಡುತ್ತಿಲ್ಲ.

ಅಧ್ಯಕ್ಷರು : 8ನೇ ತಾರೀಖಿನವರೆಗೂ ಚರ್ಚೆ ಮುಂದುವರೆಸಿದರೂ ನನಗೆ ಸಮಸ್ಯೆ ಇಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಾವೆಲ್ಲರೂ ಸೇರಿ ಒಪ್ಪಿಕೊಂಡಿದ್ದೇನೆಂದರೆ ನಾಳೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ಅದೇರೀತಿ ಅವರು ನಡೆದುಕೊಳ್ಳಬೇಕಲ್ಲ. ಸದನಕ್ಕೆ ಬಂದರಾ ಮಧ್ಯಾಹ್ನ? ತಾವೇ ಹೌಸ್ ಅಡ್ಜರ್ನ್ ಮಾಡಬೇಕಾಯಿತು. ಎಂದರೆ ಒಂದು ಕಡೆ ನಡೆದುಕೊಳ್ಳುವುದೂ ಇಲ್ಲ. ಇನ್ನೊಂದು ಕಡೆ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಹೇಗೆ ಮಾಡಬೇಕು ಎಂದು You guide me.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾಳೆ ಸಂಜೆಯವರೆಗೂ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಬಹಳ ಅರ್ಜಂಟ್ ಇದ್ದರೆ ಸಂಜೆ ಅವರು ಆರು ಗಂಟೆ ಮೇಲೆ ರಿಪ್ಲೈ ಪ್ರಾರಂಭ ಮಾಡಿ ರಾತ್ರಿ 12 ಗಂಟೆಯವರೆಗೂ ರಿಪ್ಲೈ ನಡೆಯಲಿ. 20 ಮಂತ್ರಿಗಳಿಲ್ಲರೂ ಕೂಡ ಅವರವರು ತಮ್ಮ ಡಿಮ್ಯಾಂಡ್ ಬಗ್ಗೆ ಹೇಳಬೇಕಲ್ಲ.

ಅಧ್ಯಕ್ಷರು : ನಾಳೆ ಎಷ್ಟೊತ್ತಿನವರೆಗೆ ಚರ್ಚೆ ನಡೆಸುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಆರು ಗಂಟೆಯವರೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಉತ್ತರ ಎಷ್ಟು ತಾಸು ಕೊಡುತ್ತಾರೆ ಅದು ಅವರ ಮೇಲೆ ಡಿಪೆಂಡ್ ಆಗುತ್ತದೆ. ರಾತ್ರಿ 12 ಗಂಟೆ ಅಥವಾ ಒಂದು ಗಂಟೆ ಆದರೂ ಆಗಬಹುದು.

Mr. SPEAKER : Let me hear the Hon'ble Chief Minister.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾಳೆ ಮುಂಜಾನೆ ಅಪ್ರೋಪ್ರಿಯೇಷನ್ ಬಿಲ್ ಮೂವ್ ಮಾಡಿ ನಾವು ಇಲ್ಲಿ ಪಾಸ್ ಮಾಡಿಕೊಂಡು, ಅದು ಕೌನ್ಸಿಲ್‌ಗೆ ತೆಗೆದುಕೊಂಡು ಹೋಗಬೇಕು. They have all agreed to that.

Sri. M. MALLIKARJUNA KHARGE : We have agreed, provided everything goes well. We are all ready but even a few Ministers were not present

here except 7 people. ನಿಮಗೆ ಒಂದು ಕೋರಂ ಮಾಡಿಕೊಡುವುದಕ್ಕೆ ಶಕ್ತಿ ಇಲ್ಲ. ಮತ್ತೆ ಚರ್ಚೆ ನಡೆಸಿರಿ ಎಂದು ಹೇಳುತ್ತೀರಿ?

ಶ್ರೀ ಆರ್. ವಿ. ದೇಶಪಾಂಡೆ : ಕೋರಂ ಕಡಿಮೆ ಇತ್ತು ನಿಜ. ಆದರೆ ಅದರ ಜೊತೆಗೆ ಬೇರೆ ಬೇರೆ ಇಶ್ಯೂ ಬರುತ್ತವೆ. ನಾವು ಒಪ್ಪಿಕೊಳ್ಳುತ್ತೇವೆ. ಹಾಸನ ವಿಷಯ ಬಂದಿದೆ. ಅದನ್ನು ರೈಜ್ ಮಾಡಿದಿರಿ. We agree. After all different issues come. Please cooperate with the Government. ಏಕೆಂದರೆ ಅಪ್ರೋಪ್ರಿಯೇಷನ್ ಬಿಲ್ ನಾಳೆ ಪಾಸ್ ಮಾಡಿ ಅದು ಕೌನ್ಸಿಲ್‌ಗೆ ಹೋಗಬೇಕಾಗುತ್ತದೆ. on 4th we are adjourning and we are again meeting on 8th. It is agreed that tomorrow Appropriation Bill will be moved, and it will be passed by this House and on 4th it has to go to the Council.

ಅಧ್ಯಕ್ಷರು : ಮಾನ್ಯ ಯೋಗೀಶ್‌ಭಟ್ಟರೆ, 8ನೇ ತಾರೀಖು ಅಲ್ಲ, ಈ ತಿಂಗಳ ಕೊನೆಯವರೆಗೂ ಓಟ್ ಆನ್ ಅಕೌಂಟ್ ತೆಗೆದುಕೊಂಡಿರುವುದರಿಂದ 20 ತಾರೀಖಿನವರೆಗೂ ನಡೆಸಬೇಕು ಎಂದರೆ ನಾನು ಸಿದ್ಧನಾಗಿದ್ದೇನೆ. ನನಗೆ ಏನೂ ಸಮಸ್ಯೆ ಇಲ್ಲ. ಅದನ್ನು ನೀವು ಅವರು ಇತ್ಯರ್ಥ ಮಾಡಿಕೊಳ್ಳಬೇಕು. The Government explained its difficulties. ನಾನು ಡಿಸ್‌ಕಸ್ ಮಾಡುವುದಕ್ಕೆ ಅಡ್ಡ ಇದ್ದೇನೆ ಎನ್ನುವ ಅಭಿಪ್ರಾಯ ಬರುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಸಾಯಂಕಾಲದವರೆಗೂ ಡಿಸ್‌ಕಷನ್‌ಗೆ ಅವಕಾಶ ಮಾಡಿಕೊಡಿ.

ಶ್ರೀ ಆರ್ ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾಳೆ ಸಾಯಂಕಾಲ ಚರ್ಚೆ ಆದನಂತರ ರಾತ್ರಿ ರಿಪ್ಲೈ ಹೇಗೆ ಮಾಡುವುದಕ್ಕೆ ಬರುತ್ತದೆ? ರಿಪ್ಲೈ 4ರಂದು ಮಾಡಿದನಂತರ ಅಪ್ರೋಪ್ರಿಯೇಷನ್ ಬಿಲ್ ಯಾವಾಗ ಮೂವ್ ಮಾಡಬೇಕು. ಅದನ್ನು ಕೌನ್ಸಿಲ್‌ಗೆ ಯಾವಾಗ ತೆಗೆದುಕೊಂಡು ಹೋಗಬೇಕು? Please understand the practical difficulties. ನಾನು ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತಿದ್ದೇನೆ, ಪ್ರಾಕ್ಟಿಕಲ್ಲಾಗಿ ನೋಡಿ. ಪ್ರಾಕ್ಟಿಕಲ್ಲಾಗಿ ಶಕ್ಯವಾಗಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ 47 ಡಿಮ್ಯಾಂಡ್ ಇದೆ. ಕೊನೇಪಕ್ಷ ಪ್ರಮುಖ -ವಾದಂತಹ ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದರೆ ಮತ್ತೆ ಹೀಗೆ ಮೂವ್ ಮಾಡಿಕೊಂಡು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈಗ ನಾವೆಲ್ಲರೂ ಮಾತನಾಡಿದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಅವರಿಗೆ ಎರಡು ದೃಷ್ಟಿ ಇರಬೇಕು. ಒಂದು ಸ್ಫೂರ್ತಿ ಬರಬೇಕು. ಮತ್ತೊಂದು ಚೆನ್ನಾಗಿ ಮಾತನಾಡಬೇಕು. ನಾವು ಯಾರೂ ಮಾತನಾಡದೇ ಈ ಸದನದಲ್ಲಿ ನಿಂತುಕೊಂಡು ಉತ್ತರ ಕೊಡಿ ಎಂದರೆ ಅವರು ಏನು ಕೊಡುತ್ತಾರೆ. ಅದಕ್ಕೋಸ್ಕರ ನಮ್ಮ ಈಗಿನ ಮುಖ್ಯಮಂತ್ರಿಗಳು ನಮ್ಮ ಕಡೆಯಿಂದ ಕೆಲವು ಮಾತುಗಳನ್ನು ಕೇಳಿ ನಂತರ ಅವರು ಹೇಳುತಕ್ಕಂಥಾದ್ದಕ್ಕೆ ಒಂದು ರೀತಿನೀತಿ ಇರುತ್ತದೆ.

ಅಧ್ಯಕ್ಷರು : ಈಗ ನೀವು ಅವರ ಹಿತೈಷಿ. ನೀವೇ ಅವರಿಗೆ ಹೇಳಿ ಒಪ್ಪಿಸಿ. ನಮ್ಮದೇನೂ ತಕರಾರು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನನ್ನದೇನೂ ಇಲ್ಲ. ತಾವು ಅಧ್ಯಕ್ಷರು, ಈ ಸದನದ ಯಜಮಾನರು. ಇದರಲ್ಲಿ ಸ್ನೇಹ ವಿಶ್ವಾಸಕ್ಕಿಂತ ಹೆಚ್ಚಾಗಿ ಒಂದು ಸದನದ ನಡವಳಿಕೆ, 45 ಬೇಡಿಕೆಗಳನ್ನು ತೆಗೆದುಕೊಂಡು ಒಂದು ನಿಮಿಷ ಶಾಸ್ತ್ರಕ್ಕೆ ಮಾತನಾಡಿ ಎಂದರೆ ಏಕೆ ಬೇಕು ಅದು.

ಅಧ್ಯಕ್ಷರು : ನಾವು ವಿಷಯ ಸಮಿತಿಗಳನ್ನು ಮಾಡಿದಮೇಲೆ ಬೇಡಿಕೆಗಳನ್ನು ಚರ್ಚೆ ಮಾಡತಕ್ಕಂಥ ಸಂಪ್ರದಾಯ ಇಲ್ಲ. ಆದರೂ ಕೈಬಿಡಬಾರದು ಎಂದು ಚರ್ಚೆಗೆ ಇಟ್ಟುಕೊಂಡಿದ್ದೇವೆ. 45 ಬೇಡಿಕೆಗಳು ಇದ್ದರೆ ಅದರಲ್ಲಿ ಸಬ್ಜೆಕ್ಟ್ ಕಮಿಟಿಗೆ ಸಂಬಂಧಿಸಿದಂತೆ 3-4 ವಿಷಯ ಅಷ್ಟೇ ನಾವು ಚರ್ಚೆಗೆ ತೆಗೆದುಕೊಳ್ಳಬೇಕಾಗಿರುವುದು. ಉಳಿದಂತಾದ್ದೆಲ್ಲಾ ಹಾಗೆ ಕ್ಯಾಜುಯಲ್ ಆಗಿ ಮಾಡತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ವಿರೋಧ ಪಕ್ಷದಲ್ಲಿ ಇದ್ದವರು. ಹಿಂದೆ ಈ ಸದನದಲ್ಲಿ ಅನೇಕ ಸಂದರ್ಭದಲ್ಲಿ ಮಾತನಾಡಿರತಕ್ಕಂಥವರು. ತಾವು ಈಗ ಅಧ್ಯಕ್ಷರಾಗಿದ್ದೀರಿ. ತಾವು ನೋಡಿ, ಇದು ಯಾವ ತರಹ. ನಿಮ್ಮ ಮನಸ್ಸಿಗೆ ಚರ್ಚೆ ಬೇಡ ಎಂದು ಒಪ್ಪಿದರೆ ಸಂತೋಷ. ಬಹುಶಃ ನೀವು ಒಪ್ಪಲಾರಿರಿ. ಏಕೆ ಹೀಗೆ ಮಾತನಾಡುತ್ತೀರಿ? ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ನಾನು ಏನೇನೋ ಪ್ರಯತ್ನ ಮಾಡುತ್ತೇನೆ. ನಿಮ್ಮಷ್ಟು ಬುದ್ಧಿವಂತ ಆಗಬೇಕು ಎಂದು. ಆದರೆ ಆಗುತ್ತಾ ಇಲ್ಲ? ನನ್ನ ಕೈಯಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ನೀವು ನಮಗಿಂತ ಬುದ್ಧಿವಂತರು. ನಾವು ದಡ್ಡರು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಪವರ್ ಬಗ್ಗೆ ಅನೇಕ ಸಲ ಚರ್ಚೆ ಮಾಡಿದ್ದಾರೆ. ಜೊತೆಗೆ ಬಿ.ಎ.ಸಿ. ಯಲ್ಲಿ 3ನೇ ತಾರೀಖು ಇಲ್ಲಿ ಮುಗಿಸಿ, 4ನೇ ತಾರೀಖು ಅಲ್ಲಿಗೆ ಹೋಗಬೇಕೆಂದು ತೀರ್ಮಾನವಾಗಿರತಕ್ಕಂಥಾದ್ದು. ಅಂದು ನಾವು ಅವರಿಗೆ ಮನವಿ ಮಾಡಿಕೊಂಡಿರುವುದೇನೆಂದರೆ ಬಹಳ ಮುಂಚಿತವಾಗಿ ರೀಅಪ್ರೋಪ್ರಿಯೇಷನ್ ಬಿಲ್ ಆಗಬೇಕು, ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂದು ವಿವರಣೆ ಮಾಡಿದ್ದೇವೆ. ಅದಕ್ಕೋಸ್ಕರ ನಾಳೆ ಅಥವಾ ನಾಡಿದ್ದಾದರೂ ಕೂಡ ಉತ್ತರ ಕೊಡಬೇಕು. ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಲೇಟ್ ನೈಟ್ ಆದರೂ ಪರವಾಗಿಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ನಾಳೆ ಇರುವುದಾಗಿದ್ದರೆ ಪ್ರಶ್ನೆ ಇರುತ್ತಿರಲಿಲ್ಲ. ನಾಳೆ ಅವರು ಧಾರವಾಡಕ್ಕೆ ಹೋಗುತ್ತಾರೆ.

ಶ್ರೀ ಸಿದ್ಧರಾಮಯ್ಯ : ಬೆಳಿಗ್ಗೆ ಅವರು ಉತ್ತರ ಕೊಟ್ಟು ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಸಮಗ್ರವಾಗಿ ಚರ್ಚೆ ಆದಮೇಲೆ ಅವರು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಈಗ ಎಲ್ಲಾ ಮಾತನಾಡಿದ್ದಾರಲ್ಲ.

(ಗೊಂದಲ)

ಅಧ್ಯಕ್ಷರು : ದೇಶಪಾಂಡೆಯವರೇ, ತಾವು ಮತ್ತು ಸಿದ್ಧರಾಮಯ್ಯನವರು ಈ ಮನೆಯಲ್ಲಿ ಹೆಚ್ಚು ಹೊತ್ತು ಇರಲಿಲ್ಲ. ಬಹುಶಃ ಮೇಲಿನ ಮನೆಯಲ್ಲಿದ್ದಿರಿ ಎಂದು ಕಾಣುತ್ತದೆ. ಮುಖ್ಯಮಂತ್ರಿಗಳ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗಿರತಕ್ಕಂಥಾದ್ದು ಇವತ್ತು. ಚರ್ಚೆ ಪ್ರಾರಂಭವಾದಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ ಮೇಲೆ ಭಾರತೀಯ ಜನತಾ ಪಕ್ಷದವರ ಪರವಾಗಿ ಅರಗಜ್ಞಾನೇಂದ್ರ ಮಾತನಾಡಿದ್ದಾರೆ. ಇಬ್ಬರೆ ಇದುವರೆಗೂ ಮಾತನಾಡಿರತಕ್ಕಂಥಾದ್ದು. ಬಹಳ ಪ್ರಮುಖವಾದಂತಹ ಬೇಡಿಕೆಗಳು ಕೂಡ ಚರ್ಚೆಯಾಗದೇ ಉಳಿದಿದೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿರುವುದು ಏನೆಂದರೆ ಉತ್ತರ ಯಾವುದಕ್ಕೆ ಹೇಳುವುದು ? ಚರ್ಚೆಯಾಗದೇ ಉತ್ತರ ಹೇಳುವುದು ಏನು ಚೆನ್ನಾಗಿ ಇರುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ. ಮಾನ್ಯ ದೇಶಪಾಂಡೆಯವರೆ, ನಾಳೆ ಸಂಜೆ ಮುಖ್ಯಮಂತ್ರಿಗಳು ವಾಪಸ್ಸು ಬರುತ್ತಾರಾ ?

ಶ್ರೀ ಆರ್.ವಿ. ದೇಶಪಾಂಡೆ : ಸಂಜೆ ವಾಪಸ್ಸು ಬರಬಹುದು. ನನ್ನ ಪ್ರಶ್ನೆ ಏನೆಂದರೆ ಇವತ್ತು ಬೆಳಿಗ್ಗೆಯಿಂದ ತಾವು ಚರ್ಚೆಗೆ ಅಲೋ ಮಾಡಿದ್ದೀರಿ. 3-4 ತಾಸು ಚರ್ಚೆಯಾಗಿದೆ. ಸಂಜೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ಅವರು ಬಂದನಂತರ ಅವರ ಕಡೆಯಿಂದ ರಿಪ್ಲೈ ಆಗುವುದು ಕಷ್ಟ. Naturally he has to know what they have spoken. ಇವರೆಲ್ಲಾ ಏನು ಮಾತನಾಡಿದ್ದಾರೆ ಎಂದು ನೋಡಿ ಮಾತನಾಡಬೇಕಲ್ಲ. ರಿಪ್ಲೈ ಮಾಡಬೇಕಾದರೂ ಸಹ ನಾನು ತಮಗೆ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಹೇಳುತ್ತೇನೆ. ಮುಖ್ಯವಾಗಿ ತಾವು ಹೇಳಿದ ಹಾಗೆ ಸಬ್ಜೆಕ್ಟ್ ಕಮಿಟಿಸ್ ಮಾಡಿದ್ದೇವೆ? ಥರೋ ಡಿಸ್‌ಕಷನ್ ಅಲ್ಲಿ ಆಗಬೇಕೆಂದು ಮಾಡಿದ್ದೇವೆ.In the Business Advisory Committee we have decided.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ದೇಶಪಾಂಡೆಯವರೇ, ತಾವು ವಿರೋಧಪಕ್ಷದ ನಾಯಕರಾಗಿದ್ದಾಗ, ನಿಮ್ಮ ಕಡತಗಳನ್ನು ತೆಗೆದು ನೋಡಿ. ತಾವು ಯಾವರೀತಿ ಇಲ್ಲಿ ಹೆಜ್ಜೆ ಹೆಜ್ಜೆಗೂ ತೊಂದರೆ ಕೊಟ್ಟಿದ್ದೀರಿ. ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು.

ಶ್ರೀ ಆರ್.ವಿ. ದೇಶಪಾಂಡೆ : ನಾವು ಚರ್ಚೆ ಮಾಡಬಾರದು ಎಂದು ಹೇಳುತ್ತಿಲ್ಲ.

ಅಧ್ಯಕ್ಷರು : ನೀವು ಕಂಪ್ಲೇಂಟ್ ಮಾಡುತ್ತಿದ್ದೀರಿ. ಆದರೆ ಆಗಿನ ಮುಖ್ಯಮಂತ್ರಿಗಳು ಕಂಪ್ಲೇಟ್ ಮಾಡಲಿಲ್ಲ. ನೀವು ಮಾಡುತ್ತಿರುವುದು ಅಷ್ಟೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಚರ್ಚೆ ಮಾಡಬಾರದು ಎಂದು ಹೇಳುತ್ತಿಲ್ಲ, ಆದರೆ ಪ್ರಾಕ್ಟಿಕಲ್ಲಾಗಿ ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ವಿಚಾರ ಮಾಡಲಿ. ಪ್ರಾಕ್ಟಿಕಲ್ಲಾಗಿ ನಾಳೆ ಅವರು ಚರ್ಚೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ರಾತ್ರಿ ರಿಪ್ಲೈ ಮಾಡಬೇಕು.4ನೇ ತಾರೀಖು ಬೆಳಿಗ್ಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಳ್ಳಬೇಕು. ಅದರ ಮೇಲೆ ಡಿಸ್‌ಕಷನ್ ಆಗುತ್ತದೆ.

ು ಯಾವಾಗ ಕೌನ್ಸಿಲ್‌ಗೆ ಹೋಗಬೇಕು. Suppose there is a problem in the Council, en should we come back?

ಅಧ್ಯಕ್ಷರು : ನಾನು ಹೊರಗೆ ಹೋಗಿದ್ದಾಗ ಸನ್ಮಾನ್ಯ ಕರ್ಕಿಯವರನ್ನು ಇಲ್ಲಿ ಕೂರಿಸಿ ನನ್ನ ಬರ್‌ನಲ್ಲಿ ಇದೇ ಕಸರತ್ತು ಮಾಡುತ್ತಿದ್ದೆವು. ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ನಾಣಯ್ಯನವರು ಕೆಲವು ಸದಸ್ಯರೆಲ್ಲರೂ ಬಂದಿದ್ದರು. ಇದೇ ವಿಚಾರ ನಾವೆಲ್ಲರೂ ಅಲ್ಲಿ ಚರ್ಚೆ ಮಾಡುತ್ತಿದ್ದೆವು. ನು ಕೆಲಸ ಮಾಡಬಹುದು ಎಂದು ಕಾಣುತ್ತದೆ. ನಾಳೆ ಚರ್ಚೆ ನಡೆಯುವಾಗ ಸಚಿವ ಸಂಪುಟದ ೋದ್ಯೋಗಿಗಳು ಯಾರಾದರೂ ನೋಟ್ಸ್ ಮಾಡಿಕೊಂಡಿರುತ್ತಾರೆ. ಅರ್ಧ ಗಂಟೆ ತಮಗೆ ಬ್ರೀಫ್ ವ್ವಮೇಲೆ ಸ್ವಲ್ಪ ಲೇಟ್‌ನೈಟ್ ಆದರೂ ಚಿಂತೆ ಇಲ್ಲ. ನಾಳೆ ರಾತ್ರಿಗೆ ಎಷ್ಟೊತ್ತು ಆದರೂ ್ರೀಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಳ್ಳೋಣ. ಡಿಮ್ಯಾಂಡ್ ಇಂಪಾರ್ಟೆಂಟ್. ್ರೀಪ್ರಿಯೇಷನ್ ಬಿಲ್ ಬಗ್ಗೆ ಏನು ದೊಡ್ಡ ಚರ್ಚೆಯಾಗುವುದಿಲ್ಲ..

ಶ್ರೀ ಸಿದ್ಧರಾಮಯ್ಯ : ನಾಳೆ ಪಾಸ್ ಮಾಡಿಕೊಟ್ಟರೂ ಪರವಾಗಿಲ್ಲ.

ಅಧ್ಯಕ್ಷರು : ನಾಳೆ ರಾತ್ರಿ ಸ್ವಲ್ಪ ತಡವಾದರೂ ಎಷ್ಟೊತ್ತಾದರೂ ಕುಳಿತುಕೊಳ್ಳೋಣ. ನಾನು ಷ್ಟೇ ಹೇಳುತ್ತಿದ್ದೇನೆ ಬೆಳಿಗ್ಗೆಯಿಂದ ಸಂಜೆ ಆರು ಗಂಟೆಯವರೆಗೂ ನಾಳೆ ಚರ್ಚೆ ಮಾಡೋಣ. ಗಂಟೆ ನಂತರ ಉತ್ತರ ಪ್ರಾರಂಭ ಮಾಡಿಸಿದಾಗ ಕೆಲವರು ಮಂತ್ರಿಗಳು ಮಾಡುತ್ತಿರುತ್ತಾರೆ. ಆ ರ ಮಾನ್ಯ ಮಂತ್ರಿಗಳು ಬರುತ್ತಾರೆ. ಉತ್ತರ ಎಲ್ಲಾ ಮುಗಿದಮೇಲೆ ಅಪ್ರೋಪ್ರಿಯೇಷನ್ ಬಿಲ್ ುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಯಾವ ಉದ್ದೇಶದಿಂದ ಚರ್ಚೆ ುಗಬೇಕೆಂದು ನಾವೆಲ್ಲಾ ಸೇರಿದ್ದೇವೆ, ಅದು ಪರ್ಪಸ್ ಅನೇಕ ಕಾರಣದಿಂದ ಸರ್ವ್ ಆಗುತ್ತಿಲ್ಲ. ಸದನ ಅರ್ಧ ಗಂಟೆ ಲೇಟಾಗಿ ಸೇರಿತು. ಮೊದಲ ಸಾಲಿನಲ್ಲಿ ಮಂತ್ರಿಗಳು ಯಾರೂ ಇರಲಿಲ್ಲ ು ಮುಕ್ಕಾಲು ಗಂಟೆ ಮುಂದೆ ಹೋಯಿತು. ಈ ರೀತಿ ಅನೇಕ ವಿಷಯಗಳು ಆಗುತ್ತವೆ. ಈಗ ಕ್ಷವನ್ನು ಗಣನೆಗೆ ತೆಗೆದುಕೊಳ್ಳದೆ ಇದ್ದರೆ ಹೇಗೆ. ನೀವು ಒಂದು ಸಮಯವನ್ನು ನಿಗದಿ ಮಾಡಿ. ಬ್ಬ ಸದಸ್ಯರು 45 ಅಥವಾ 30 ನಿಮಿಷದ ಮೇಲೆ ಯಾರೂ ಮಾತನಾಡಬೇಡಿ ಎಂದು ಹೇಳಿ ಅಡ್ಜಸ್ಟ್ ಮಾಡಿಕೊಂಡು ಎಲ್ಲರೂ ತಮ್ಮ ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ್ತ ಒಂದು ದಿವಸ ಪೂರ್ತಿ ಕಳೆಯಿತು. ಆದುದರಿಂದ, ನೀವು ನಮಗೆ ಅವಕಾಶ ಮಾಡಿಕೊಟ್ಟರೆ ಇಲ್ಲಿ ಕುಳಿತುಕೊಂಡಿರುವುದಕ್ಕೆ ಪರ್ಪಸ್ ಸರ್ವ್ ಆಗುತ್ತದೆ. ಇಲ್ಲದಿದ್ದರೆ ಪರ್ಪಸ್ ಸರ್ವ್ ುದಿಲ್ಲ.

ಅಧ್ಯಕ್ಷರು : ಈಗಲೂ ನನ್ನ ಅಂದಾಜು ಏನೆಂದರೆ ಕೆಲವರೆಲ್ಲಾ ಮಾತನಾಡತಕ್ಕಂಥವರು ಇವತ್ತು ಕೂಡ 10 ಗಂಟೆಯಾದರೂ ಕೂಡ ಚಿಂತೆ ಇಲ್ಲ. ನಾನು ಕುಳಿತು ಕೊಳ್ಳುವುದಕ್ಕೆ ತಯಾರಿದ್ದೇನೆ. ರೆಲ್ಲಾ ಮಾತನಾಡಬಹುದು.

ಅಧ್ಯಕ್ಷರು : ಸುರೇಶ್‌ರವರೆ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಇ
ದಯಮಾಡಿ ಪ್ರಸ್ತಾಪ ಮಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸಲ್, ಎಲ್‌ಪಿ.ಜಿ. ಬೆಲೆ ಜಾಸ್ತಿ ಮಾಡಿರುವುದ

+ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಕೇಂದ್ರ ಸರ್ಕಾರ ಪೆಟ್ರೊ
ಡೀಸೆಲ್, ಎಲ್.ಪಿ.ಜಿ. ಮೇಲೆ ರೇಟ್ ಜಾಸ್ತಿ ಮಾಡಿದೆ. ಒಂದು ಲೀಟರ್‌ಗೆ ಒಂದು ರೂಪಾಯಿ
ಜಾಸ್ತಿ ಮಾಡಿದೆ ಎಂದು ಪೇಪರ್‌ನಲ್ಲಿ ಓದಿದ್ದೇವೆ. ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದಿಂದ
ಸರ್‌ಚಾರ್ಜ್ ಹಾಕಿದ್ದಾರೆ ಎಂದು ಗೊತ್ತಿಲ್ಲದೆ ಬೆಂಗಳೂರಿನ ಗ್ರಾಹಕರಿಗೆ ತೊಂದರೆಯಾಗಿ ಒ
ಲೀಟರ್‌ಗೆ ಎಷ್ಟು ಬೆಲೆ ಆಗಿದೆ ಎಂದು ಬೆಂಗಳೂರಿನಲ್ಲಿ ಪೆಟ್ರೋಲನ್ನು ಉಪಯೋಗಿಸುವಂತಹ
ಗೊತ್ತಿಲ್ಲ. ಅದಕ್ಕೋಸ್ಕರ ತಮ್ಮ ಮುಖಾಂತರ ಕೇಳುತ್ತೇನೆ ಏಕೆಂದರೆ, ಅವರು ರೇಟ್
ಮಾಡಿರುವುದು ಒಂದು ರೂಪಾಯಿ. ಬೆಂಗಳೂರಿನಲ್ಲಿ ಇವ್ಯೊತ್ತು 28.40 ಪೈಸೆಗೆ ಮಾರುತ್ತಿ
ಆದುದರಿಂದ ಬೆಂಗಳೂರಿನಲ್ಲಿ ಪೆಟ್ರೋಲ್ ಮತ್ತು ಡೀಸಲ್‌ಗೆ ರಾಜ್ಯಸರ್ಕಾರದಿಂದ ಸರ್‌ಚಾ
ಹಾಕಿದ್ದೀರಾ ಎಂಬುದನ್ನು ಹೇಳಿ?

ಶ್ರೀ ಸಿದ್ಧರಾಮಯ್ಯ : ಸರ್‌ಚಾರ್ಜ್‌ಗೆ ನಾವು ಹೊಸದಾಗಿ ಯಾವುದೇ ಟ್ಯಾಕ್ಸ್‌ಗ
ಹಾಕುವುದಿಲ್ಲ. ಸರ್‌ಚಾರ್ಜ್‌ನ್ನೆಲ್ಲ ಅವರೇ ಹಾಕುವುದು.

ಶ್ರೀ ಆರ್. ವಿ. ದೇಶಪಾಂಡೆ : ಒಂದು ರೂಪಾಯಿಯಿಂದ ಮೂರೂವರೆ ರೂಪಾಯಿ
ಹೆಚ್ಚಾಗಿದೆ ನಿಜ. ಅದು ಏನು ಇದೆ ಎಂಬುದನ್ನು ನಾನು ತಿಳಿದುಕೊಂಡೆ. ಕೇಂದ್ರ ಸರ್ಕಾರ ಬೇರೆ
ರಾಜ್ಯಕ್ಕೆ ಬೇರೆ ತರಹದ ಸರ್‌ಚಾರ್ಜ್‌ನ್ನು ಲೆವಿ ಮಾಡುತ್ತಾರೆ. We will enquire with the G
of India.

ಶ್ರೀ ವಾಟಾಳ್ ನಾಗರಾಜ್ : ಒಂದು ಲೀಟರ್‌ಗೆ ಏಕ್‌ದಂ 28.50 ರೂಪಾಯಿ ಮಾಡಿ
ಏಕೆ ಅಷ್ಟು ಜಾಸ್ತಿ ಮಾಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ, ಅವರ ಲೆಕ್ಕಾಚಾರ ನಮಗೆ ಅರ್ಥವಾಗು

ಶ್ರೀ ಸಿದ್ಧರಾಮಯ್ಯ : ಸೇಲ್ಸ್ ಟ್ಯಾಕ್ಸ್ ಎಷ್ಟು ಇದೆಯೋ ಅಷ್ಟೇ ಇದೆ. ನಾವು ಯಾ
ಸರ್‌ಚಾರ್ಜ್ ಹಾಕಿಲ್ಲ. ಸರ್‌ಚಾರ್ಜನ್ನು ನಾವು ತೆಗೆದೇ ಬಿಟ್ಟಿದ್ದೇವೆ. ಆ ಸರ್‌ಚಾರ್ಜ್ ಕೆ
ಸರ್ಕಾರದ್ದು.

ಅಧ್ಯಕ್ಷರು : ಭಾರತ ಸರ್ಕಾರದವರು ಪುನರ್‌ವಿಮರ್ಶೆ ಮಾಡಿರತಕ್ಕಂಥ ದರವನ್ನು
ಹಾಕಿದರೆ ಒಂದು ಲೀಟರ್‌ಗೆ 28.40 ಆಗುತ್ತದೆಯೇ ಅಥವಾ ಈ ಪೆಟ್ರೋಲ್ ಪಂಪ್ಸ್‌ನವರು
ಜಾಸ್ತಿ ಮಾಡಿದ್ದಾರಾ ಎನ್ನತಕ್ಕಂಥ ವಿಚಾರದಲ್ಲಿ ವಿವರಣೆ ತೆಗೆದುಕೊಂಡು ನಾಳೆ ಆಹಾರ ಮ
ನಾಗರೀಕ ಸರಬರಾಜು ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಮಾಡಿಸೋಣ. ಈಗ ರಾಮದ